ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಆಶ್ರಯ ಸಮಿತಿ ಅಧ್ಯಕ್ಷತೆ ಕುರಿತಂತೆ ಸರ್ಕಾರ ನಿನ್ನೆ ತುಂಬಾ ಸ್ಪಷ್ಟವಾಗಿ ಹೇಳಿಕೆ ಕೊಟ್ಟಿದೆ.

ಅಧ್ಯಕ್ಷರು: ಈಶ್ವರಪ್ಪನವರೆ, ಮೊದಲು ಪ್ರಶ್ನೋತ್ತರ ಆಗಲಿ.

ಶ್ರೀ ಕೆ.ಎಸ್.ಈಶ್ವರಪ್ಪ: ಸರ್ ನಿನ್ನೆ ಏನಾಗಿತ್ತು ಎಂದರೆ, ಧರಣಿ ಇತ್ತು. ಧರಣಿ ಕುಳಿತಿದ್ದರು. ನಾನು ಇವೊತ್ತು ತಮಗೆ ಸ್ಪಷ್ಟವಾಗಿ ಹೇಳಲು ಇಚ್ಛೆಪಡುತ್ತೇನೆ. ತಮಗೆ ಹೇಳುವುದಿಷ್ಟೆ ಸದನದ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುವುದಿಲ್ಲ, ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ, ರಾಜ್ಯ ಸರ್ಕಾರ ಇಡೀ ರಾಜ್ಯದ ಜನತೆಗೆ ಈ ವಿಧಾನಮಂಡಲದ ಮುಖಾಂತರ 'ಆಶ್ರಯ ಸಮಿತಿಗೆ ಅಧ್ಯಕ್ಷರನ್ನು ಈ ವಿಧಾನಮಂಡಲದ ಅಧಿವೇಶನ ಮುಗಿಯುವುದರೊಳಗೆ ನಾವು ತಿದ್ದುಪಡಿ ತಂದು ನಾವು ಖಂಡಿತಾ ಮಾಡುತ್ತೇವೆ' ಎನ್ನುವ ಮಾತನ್ನು ಕಂದಾಯ ಸಚಿವರಾದ ಶ್ರೀ ಎಂ.ಪಿ.ಪ್ರಕಾಶ್‌ರವರು ಮತ್ತು ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರೂ ಕೂಡ ಇಡೀ ಸದನಕ್ಕೆ ಆಶ್ವಾಸನೆ ನೀಡಿದ್ದರು. ಈಗ ಸದನದಲ್ಲಿ ಕೊಟ್ಟ ಆಶ್ವಾಸನೆ ಬಗ್ಗೆ ಈ ರೀತಿ ಹೇಳಿಕೆಯೇ ಕೊಟ್ಟಿಲ್ಲವೆನ್ನುವ ರೀತಿಯಲ್ಲಿ ಹೇಳಿದರೆ, ಅಧ್ಯಕ್ಷರೆ ನಾವು ಇನ್ಯಾರನ್ನು ನಂಬಿಕೊಳ್ಳಬೇಕು? ಅದಕ್ಕೋಸ್ಕರ ಇವೊತ್ತು ಪ್ರಶ್ನೆ ಬಂದಿರುವುದೇನೆಂದರೆ, ನಿನ್ನೆ ತಾವು ಇಲ್ಲದಿರುವ ಸಂದರ್ಭದಲ್ಲಿ, ಸಭಾಧ್ಯಕ್ಷರ ಪೀಠದಲ್ಲಿ ಬೇರೆಯವರು ಕುಳಿತಿದ್ದಾಗ ಈ ಸದನವನ್ನು ನಾವು ಅರ್ಧ ಗಂಟೆ ಕಾಲ ಮುಂದೂಡಿ ಸರ್ಕಾರ ಈ ಕುರಿತಂತೆ ಆಶ್ವಾಸನೆ ಕೊಟ್ಟಿದೆಯೇ? ಇಲ್ಲವೇ? ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಕೇಳಿದಾಗ, ಧರಣಿ ನಡೆಯುತ್ತಿದ್ದ ಸಂದರ್ಭದಲ್ಲಿ ಇದ್ದಕ್ಕಿದಂತೆ ಹೌಸ್ ಅಡ್ಜರ್ನ್ ಆಗಿದೆ. ಅದಕ್ಕೋಸ್ಕರ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಿಷ್ಟೇ. ತಾವು ಸದನದಲ್ಲಿ ಆಶ್ವಾಸನೆ ನೀಡಿದ್ದು ಹೌದೇ? ಅಲ್ಲವೇ? ಈಗಲಾದರೂ ತುಂಬಾ ಸ್ಪಷ್ಟಪಡಿಸಬೇಕು. ಏಕೆಂದರೆ ನಿನ್ನೆ ಹೌಸ್ ಅಡ್ಜರ್ನ್ ಆದ ನಂತರ ಸರ್ಕಾರ ಈ ದಿಕ್ಕಿನಲ್ಲಿ ಈ ಕುರಿತಾದ ದಾಖಲೆಯನ್ನು ತರಿಸಿ ನೋಡುವ ಮೂಲಕ ಈಗಾಗಲೇ ತೀರ್ಮಾನ ತೆಗೆದುಕೊಂಡಿರಬೇಕು. ಹೀಗಾಗಿ, ಇಡೀ ರಾಜ್ಯದ ಜನರು ಈ ಸರ್ಕಾರ ಆಶ್ವಾಸನೆ ಕೊಟ್ಟಿದ್ದನ್ನು ಈಡೇರಿಸುತ್ತದೆಯೇ? ಇಲ್ಲವೇ? ಎನ್ನುವ ಪ್ರಶ್ನೆ ಎದುರಾಗಿ ಅವರೆಲ್ಲರೂ ಕಾತುರದಿಂದ ಎದುರು ನೋಡುತ್ತಿದ್ದಾರೆ. ಈ ದಿಸೆಯಲ್ಲಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುವುದು ಇಷ್ಟೇ. ತಾವು ಇವೊತ್ತು ತುಂಬಾ ಸ್ಪಷ್ಟವಾದ ಹೇಳಿಕೆ ಕೊಡಬೇಕು. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರು ಏನು ಹೇಳಿದ್ದರು, ಆ ಹೇಳಿಕೆ ಸತ್ಯವಿದೆ. ಈ ಸದನ ಮುಗಿಯುವುದರೊಳಗೆ ನಾವು ಖಂಡಿತಾ ಇದನ್ನು ಜಾರಿಗೆ ತರುತ್ತೇವೆಂದು ಹೇಳಿಕೆ ಕೊಡಬೇಕು. ಇಲ್ಲವೆಂದರೆ ಸದನದಲ್ಲಿ

ಅವರು ಹೇಳಿಕೆ ಕೊಟ್ಟಿರುವ ಕಡತ ನಮ್ಮ ಬಳಿ ಇದೆ. ನನಗನಿಸುತ್ತದೆ ತಮ್ಮ ಹತ್ತಿರ ಕೂಡ ಅದರ ನಡವಳಿಕೆ ಇರಬಹುದು. ಇದನ್ನು ಈ ಸದನದ ಮುಂದೆ ಟೇಬಲ್ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು: ಇದರ ಬಗ್ಗೆ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪ ಆದಿಯಾಗಿ ಎಲ್ಲರೂ ಅದನ್ನೇ ಮಾತನಾಡಿದ್ದಾರೆ. ಒಬ್ಬರು ಮಾತನಾಡಿದರೆ ಸಾಕು. ಈಶ್ವರಪ್ಪನವರೆ, ಈಗ ಪ್ರಶ್ನೋತ್ತರ ಅವಧಿ ಮುಗಿದ ಬಳಿಕ ಮಾನ್ಯ ಉಪ ಮುಖ್ಯಮಂತ್ರಿಯವರು ಬರುತ್ತಾರೆ. ಇವೊತ್ತು ವಿತ್ತೀಯ ಕಾರ್ಯಕಲಾಪ ಇದೆ. ಅವರು ಅದರ ಬಗ್ಗೆ ಏನು ಹೇಳುತ್ತಾರೆಂಬುದನ್ನು ನೋಡೋಣ. ಅಷ್ಟರೊಳಗೆ ಇವರೂ ಬರುತ್ತಾರೆ. ಆಗ ಹೇಳೋಣ ಇದು ಏನಾದರೂ ಆಗದಿದ್ದರೆ, ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಊರಿನಲ್ಲಿಲ್ಲ. ನಾಳೆ ಬೆಳಿಗ್ಗೆ ಅಧಿವೇಶನ ಸೇರುವ ಅರ್ಧ ಗಂಟೆ ಮೊದಲು Business Advisory Committee ಕರೆದು ತಮ್ಮೆಲ್ಲರನ್ನೂ ಸಭೆಗೆ ಕರೆಸುತ್ತೇನೆ. ಆಗ ಮಾತನಾಡೋಣ, ಒಂದು ಸೆಟ್ಲ್ ಆಗಲಿ. ಅವರು ಏನು ಹೇಳಿದ್ದಾರೆ, ಏನಾಗಿದೆ ಎಂಬುದನ್ನು ನೋಡೋಣ. ಇವೆಲ್ಲವನ್ನೂ ಮಾಡೋಣ, ಸ್ವಲ್ಪ ಅವಕಾಶ ಕೊಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಹೋದ ಸಲ ಎಲ್ಲಾ ಪಕ್ಷದವರನ್ನು ಕರೆದು ಸನ್ಮಾನ್ಯ ಮುಖ್ಯಮಂತ್ರಿಗಳು ಆರ್‌ಡಿಪಿಆರ್ ಸೆಕ್ರೆಟರಿಯವರಿಗೆ 'ನೀವು ಮುಂದಿನ ಅಸೆಂಬ್ಲಿಯಲ್ಲಿ ಬಿಲ್ಲಿಗೆ ಅಮೆಂಡ್‌ಮೆಂಟ್ ತನ್ನಿ' ಎಂದು ಸರ್ವಪಕ್ಷಗಳ ನಿಯೋಗದ ಮುಂದೆ ಮಾತನಾಡಿದರು. ಆದಾದ ನಂತರ ಈ ಸದನದಲ್ಲಿ ಆ ಕುರಿತು ಪ್ರಸ್ತಾಪಿಸಿದಾಗ, ಪ್ರಶ್ನೆ ಬಂದಾಗ ಸನ್ಮಾನ್ಯ ಕಂದಾಯ ಸಚಿವರು ಮಾತನಾಡಿ ಇದನ್ನು 2–3 ದಿವಸದೊಳಗೆ ಇತ್ಯರ್ಥ ಮಾಡುತ್ತೇವೆಂದರು. ಉಪಮುಖ್ಯಮಂತ್ರಿಯವರು ಮಾತನಾಡುತ್ತಾ ಈ ಅಧಿವೇಶನ ಮುಗಿಯುವುದರೊಳಗೆ ಇದನ್ನು ನಾವು ಮಾಡುತ್ತೇವೆಂದರು. ನಿಮ್ಮೆದುರಿಗೂ Business Advisory Committeeಯಲ್ಲೂ ಇದನ್ನು ಪ್ರಸ್ತಾಪಿಸಿದ್ದೇವೆ.

ಅಧ್ಯಕ್ಷರು: ಪ್ರಸ್ತಾಪವಾಯಿತು. ಅದೆಲ್ಲದರ ಬಗ್ಗೆ ಇಲ್ಲಿ ಚರ್ಚೆಯಾಗುವುದು ಬೇಡ. ಈಗ ನನಗೆ ಅರ್ಥವಾಯಿತು. ಇದನ್ನು ಹೇಳುವ ಅಗತ್ಯವಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅಧ್ಯಕ್ಷರೆ, ನಮ್ಮ ಮಾತನ್ನು ತಾವು ಸ್ವಲ್ಪ ಕೇಳಬೇಕು. ಆಶ್ರಯ ಯೋಜನೆಯಲ್ಲಿ ಉಂಟಾದ ಗೊಂದಲದಲ್ಲಿ ಇಡೀ ವರ್ಷದಲ್ಲಿ ಒಂದು ಮನೆಯನ್ನೂ ಕಟ್ಟಿಲ್ಲ. ಈ ರಾಜ್ಯದಲ್ಲಿ ಒಂದೇ ಒಂದು ಮನೆಯನ್ನೂ ನಿರ್ಮಿಸಿಲ್ಲ.

ಇದನ್ನು ಮುಂದೂಡುತ್ತಾ ಹೋದರೆ, ಮುಂದಿನ ವರ್ಷ ಕೂಡ ಒಂದು ಮನೆಯೂ ಆಗುವುದಿಲ್ಲ. ಯಾರು ಮಾಡುವುದು? ಏನು ಮಾಡುವುದು? ಈ ಗೊಂದಲಗಳ ಮಧ್ಯೆ ಸರಿಯಾದ ತೀರ್ಮಾನವಾಗದೆ ಕಳೆದ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಒಂದೇ ಒಂದು ಮನೆಯನ್ನೂ ತಾಲ್ಲೂಕುಗಳಲ್ಲಿ ನಾವು ಕಟ್ಟಿಸುವುದಕ್ಕಾಗಲಿಲ್ಲ. ಸೆಲೆಕ್ಷನ್ ಕಮಿಟಿ ಇಲ್ಲ. ಇವರು ಕುಳಿತುಕೊಳ್ಳುತ್ತಾರೆ, ಇಲ್ಲಿಂದ ಯಾರಿಗೋ ಬರೆದು ಕಳುಹಿಸುತ್ತಾರೆ, ಅಲ್ಲಿ ಫಲಾನುಭವಿಗಳು ಸಿಕ್ಕುವುದಿಲ್ಲ, ಪಂಚಾಯಿತಿಗಳನ್ನು ಚೇಂಜ್ ಮಾಡುವಂತಿಲ್ಲ. ಇಂತಹ ಸ್ಥಿತಿ ಏನು ನಿರ್ಮಾಣವಾಗಿದೆ, ಭಾರಿ ಗೊಂದಲ ಸೃಷ್ಟಿಯಾಗಿದೆ.

(ಸದನದಲ್ಲಿ ಮೊಬೈಲ್ ರಿಂಗಣಿಸಿತು)

ಅಧ್ಯಕ್ಷರು: ಇದು ಮೊಬೈಲ್ ಧ್ವನಿಯೇ? ನಿನ್ನೆಯೂ ಇದೇ ರೀತಿ ಸದನದಲ್ಲಿ ಮೊಬೈಲ್‌ಗಳು ಧ್ವನಿ ಮಾಡುತ್ತಿದ್ದವು. ಸದಸ್ಯರುಗಳಾದವರು ಸದನಕ್ಕೆ ಮತ್ತೆ ಏಕೆ ಮೊಬೈಲುಗಳನ್ನು ತರುತ್ತೀರಿ? ಸದನಕ್ಕೆ ಬರುವಾಗ ಮೊಬೈಲ್‌ಗಳನ್ನು ಹೊರಗಿಟ್ಟು ಬರಬೇಕು ಇಲ್ಲವೇ switched off ಮಾಡಿಕೊಂಡು ತರಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: ಎರಡನೆಯದು, ಇಲ್ಲಿ ಧರಣಿ ಆಗುತ್ತಿರಬೇಕಾದರೆ ಹೌಸ್ ಅಡ್ಜರ್ನ್ ಆಗಿದೆ. ಧರಣಿ ಆಗುತ್ತಿರುವಾಗ ಹೌಸ್ ಅಡ್ಜರ್ನ್ ಆದಾಗ, ನೀವು ಆ ಕುರಿತಂತೆ ಒಂದು ತೀರ್ಮಾನ ಕೈಗೊಳ್ಳದೇ ಹೋದರೆ ನಾವು ಮತ್ತೆ ಧರಣಿಗೆ ಹೋಗಬೇಕಾಗುತ್ತದಲ್ಲವೇ?

ಅಧ್ಯಕ್ಷರು: ನಾನು ಹೇಳುವುದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ನಿಮ್ಮ ಮಾತಿನ ಬಗ್ಗೆ ನಮಗೆ ಖಂಡಿತಾ ಗೌರವವಿದೆ.

ಅಧ್ಯಕ್ಷರು: ಈಗ ಸದನಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳು ಬರಲಿ.

ಶ್ರೀ ಕೆ.ಎಸ್.ಈಶ್ವರಪ್ಪ: ನಿನ್ನೆ ಕೂಡ ಹಿರಿಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಇದ್ದರು. ಅವರೆದುರಿಗೇ ಇದಿಷ್ಟೂ ನಡೆದಿದೆ. ಇದರ ಬಗ್ಗೆ ತುಂಬಾ ಸ್ಪಷ್ಟವಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದ್ದರೂ ಸಹ ನಾವು ಆಶ್ವಾಸನೆ ಕೊಟ್ಟೇ ಇಲ್ಲ ಅನ್ನುವಂತಹ ಮಾತನ್ನು ಸರ್ಕಾರ ಹೇಳುವಂತಹ ಸ್ಥಿತಿ ಬಂದಾಗ ಹಾಗಾದರೆ, ನಾವು ಇನ್ಯಾರನ್ನು ನಂಬಬೇಕಾಗುತ್ತದೆ?

ಅಧ್ಯಕ್ಷರು: ಈಶ್ವರಪ್ಪನವರೆ, ಈಗ ನಾನು ತಿಳಿಸುವುದೇನೆಂದರೆ, ಈಗ ಪ್ರಶ್ನೋತ್ತರ ಅವಧಿ ಮುಗಿದ ನಂತರ ಅವರು ಸದನಕ್ಕೆ ಬರುತ್ತಾರೆ. ಆಗ ನೀವು ಅದನ್ನು ಪ್ರಸ್ತಾಪಿಸಿ. ಆಗ ಅವರು ಏನು ಹೇಳಿದ್ದಾರೆಂಬುದನ್ನು ಚರ್ಚಿಸೋಣ.

ಶ್ರೀ ಜೆ.ಸಿ ಮಾಧುಸ್ವಾಮಿ: ಕ್ವೆಶ್ಚನ್ ಅವರ್ ಆದ ನಂತರ ಹೇಗೆ ಕೇಳುತ್ತೀರಿ? ನಿನ್ನೆ ಧರಣಿ ನಿಂತಿದ್ದಾಗ ಅಡ್ಜರ್ನ್ ಮಾಡಿದ ಬಳಿಕ ಹೇಗೆ ಕೇಳುತ್ತೀರಿ?

ಅಧ್ಯಕ್ಷರು: ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ: ನೋಡಿ ಸರ್, ಇದು ತಮ್ಮ ಆಫೀಸಿನಿಂದಲೇ ತರಿಸಿರುವ ಕಾಪಿ. ಈ ವಿಚಾರವನ್ನು ಚರ್ಚೆ ಮಾಡಿದ ಮೇಲೆ 'ಈ ವಿಚಾರದಲ್ಲಿ ವಿವರವಾದ ಚರ್ಚೆಯಾಗಬೇಕೆಂದು ಸಚಿವ ಸಂಪುಟದ ಉಪಸಮಿತಿ ಮಾನ್ಯ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಆಗಿದೆ. ಪ್ರಾಯಶಃ ಇನ್ನು ಎರಡು ದಿವಸದೊಳಗಾಗಿ ಮಾಡಿ ಈ ಅಧಿವೇಶನದಲ್ಲಿ ಅಂತಹ ವಿಚಾರಗಳನ್ನು, ಕೊಟ್ಟಂಥ ಭರವಸೆಗಳನ್ನು ನೆರವೇರಿಸುವುದಕ್ಕೆ ನಾವು ಕ್ರಮ ಕೈಗೊಳ್ಳುವುದರ ಬಗ್ಗೆ ತಮ್ಮ ಹತ್ತಿರ ಮಾತನಾಡುತ್ತೇವೆ' ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೌಸ್‌ನಲ್ಲಿ ಕೊಟ್ಟಿರುವ ಹೇಳಿಕೆ ಇದಾಗಿದೆ. ಈಗ ನಾವೇನು ಮಾಡಬೇಕು? ಹೇಳಿ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ಅವಧಿಯಾಗುವಷ್ಟರೊಳಗೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಸದನಕ್ಕೆ ಬರುತ್ತಾರೆ. ಮೊದಲು ಕ್ವೆಶ್ಚನ್ ಅವರ್ ಆಗಲಿ. ಆನಂತರ ಪ್ರಸ್ತಾಪ ಮಾಡಿ. ಆಗ ಅವರು ಏನು ಹೇಳುತ್ತಾರೆಂಬುದನ್ನು ನೋಡೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಮ್ಮ ಸಮಕ್ಷಮ ಮತ್ತು ತಮ್ಮ ಘನ ಅಧ್ಯಕ್ಷತೆಯಲ್ಲಿಯೇ ಕೊಟ್ಟಿರುವ ಮಾತು ಇದಾಗಿದೆ.

ಅಧ್ಯಕ್ಷರು: ಹೌದು. ನಾನು ಇಲ್ಲವೆಂದು ಹೇಳುತ್ತಿದ್ದೇನೆಯೇ? ಅವರು ಬರಲಿ. ಸ್ವಲ್ಪ ಸಹಕರಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಹೇಗೆ ಸಹಕರಿಸುವುದು ಸರ್. ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ, ಈಗ ಚರ್ಚೆಯಾದ ಬಳಿಕ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಹಾಗೆಯೇ, ಉಪ ಮುಖ್ಯಮಂತ್ರಿಗಳೂ ಕೂಡ ಬರುತ್ತಾರೆ. ಆಗ ಇದರ ಬಗ್ಗೆ ಪ್ರಸ್ತಾಪಿಸಬಹುದು. ಏಕೆಂದರೆ, ಒಂದು ಸಮಿತಿ ಕಾನ್‌ಸ್ಟಿಟ್ಯೂಟ್ ಮಾಡುತ್ತೇವೆ, ಜೊತೆಗೆ ನಿಮ್ಮೊಂದಿಗೂ ಚರ್ಚೆ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಇನ್ನೂ ಚರ್ಚೆಯಾಗಿಲ್ಲ, ಅದರ ಅಮೆಂಡ್‌ಮೆಂಟ್ ಸಹ ಬಂದಿಲ್ಲ. ಇವರು ಹೇಳುವುದೇನೆಂದರೆ, ಅಮೆಂಡ್‌ಮೆಂಟ್ ಅನ್ನು ಈ ಅಧಿವೇಶನದಲ್ಲಿಯೇ ತರುತ್ತೇವೆಂದು ಹೇಳಿದ್ದೀರಿ ಎನ್ನುವ ಮಾತನ್ನು ನಿನ್ನೆ ಹೇಳಿದರು. ಇವೊತ್ತಿನ ಅವರು ಕೊಟ್ಟ, ಇಲ್ಲಿ ತೋರಿಸಿದ ಹೇಳಿಕೆ ಪ್ರಕಾರ ನಿಮ್ಮ ಜೊತೆಯಲ್ಲೂ

ಕೂಡ ಚರ್ಚೆ ಮಾಡಿ ಮುಂದಿನ ಕ್ರಮ ಜರುಗಿಸುತ್ತೇವೆಂದು ಹೇಳಿದ್ದಾರೆ. ಅವರು ಸದನಕ್ಕೆ ಬರುತ್ತಾರೆ. ಬಂದ ನಂತರ ಪ್ರಸ್ತಾಪ ಮಾಡಬಹುದು. ಈಗ ಕ್ವೆಶ್ಚನ್ ಅವರ್ ನಡೆಯಲಿ. ಆಮೇಲೆ ಮಧ್ಯದಲ್ಲಿ ಸಾಕಷ್ಟು ಸಮಯ ಇರುತ್ತದಲ್ಲ, ಇವೊತ್ತಿದೆ, ನಾಳೆ ಮತ್ತು ನಾಡಿದ್ದು ಇರುತ್ತದೆ. ಆಗ ಪುನಃ ಪ್ರಸ್ತಾಪಿಸಬಹುದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಮುಖ್ಯಮಂತ್ರಿಯವರನ್ನು ಕರೆದು ಈ ಸೆಶನ್‌ನಲ್ಲಿಯೇ ಬಿಲ್ ತರುತ್ತೇವೆಂದು ಹೇಳಿದ್ದು, ಆ ಮಾತನ್ನು ಅವರು ಅಸೆಂಬ್ಲಿಯಲ್ಲಿ ಹೇಳಿದ್ದಾರೆಂದು ಹೇಳಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮೆಲ್ಲರನ್ನೂ ಕರೆದು ಮೀಟಿಂಗ್ ಮಾಡಿ ಮುಂದಿನ ಅಧಿವೇಶನದಲ್ಲಿ ಬಿಲ್ ಇಡಬೇಕೆಂದು ಆರ್‌ಡಿಪಿಆರ್ ಸೆಕ್ರೆಟರಿಯವರಿಗೆ ಹೇಳಿದ್ದು ಒಂದು ಭಾಗ. ಸನ್ಮಾನ್ಯ ಕಂದಾಯ ಸಚಿವರು ಇಲ್ಲಿ ನಿಂತುಕೊಂಡು ಇನ್ನೆರಡು ದಿವಸದೊಳಗೆ ಬಗೆಹರಿಸುತ್ತೇವೆ ಎಂದು ಹೇಳಿರುವುದು ಇನ್ನೊಂದು ಭಾಗ ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತಾ ಇದು ನನ್ನ ಮುಂದೆ ಬಂದಿದೆ, ಇದನ್ನು ಒಪ್ಪಿಕೊಂಡಿದ್ದೇವೆ, ಮಾಡಿಯೇ ಮಾಡುತ್ತೇವೆಂದು ಹೇಳಿರುವುದು ಮೂರನೆಯ ಭಾಗ.

ಅಧ್ಯಕ್ಷರು: ಆಯಿತು ಮಾಧುಸ್ವಾಮಿಯವರೆ. ಈಗ ಎಲ್ಲವನ್ನೂ ಹೇಳಿದ್ದೀರಿ. ಈಗ ಅವರು ಸದನಕ್ಕೆ ಬರಲಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಅದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಸದನಕ್ಕೆ ಈಗ ಉಪ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರು ಬರುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ರೆಕಾರ್ಡ್ ಇದೆಯಲ್ಲ ಸರ್.

ಅಧ್ಯಕ್ಷರು: ಈಗ ಸುಮ್ಮನೆ ಕಾಲವ್ಯಯ ಮಾಡುವುದು ಬೇಡ. ಅವರು ಬಂದ ನಂತರ ಪ್ರಸ್ತಾಪ ಮಾಡಿ. ಈಗ ಪ್ರಶ್ನೋತ್ತರ ಆರಂಭಿಸೋಣ. ಈಗ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ ಅವರು ಪ್ರಶ್ನೆ ಕೇಳಬೇಕು...ದಯಮಾಡಿ ಪ್ರಶ್ನೋತ್ತರ ಮುಗಿದ ಬಳಿಕ ಪ್ರಸ್ತಾಪಿಸಿ. ನಾನು ಅದನ್ನು ನೋಡಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: 'ಶಾಸಕರ ಅಧ್ಯಕ್ಷತೆಯಲ್ಲೇ ಆಶ್ರಯ ಸಮಿತಿ ರಚನೆಯಾಗಬೇಕೆಂಬ ಬಗ್ಗೆ ಚರ್ಚೆಯಾದಾಗ ಅದರ ಬಗ್ಗೆ ನಾವು ಒಪ್ಪಿಕೊಂಡಿದ್ದೇವೆ. ಅದಕ್ಕೆ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳಾಗಬೇಕು. ಆ ತಿದ್ದುಪಡಿಗಳನ್ನು ತರುತ್ತೇವೆ. ಈ ತಿದ್ದುಪಡಿಯನ್ನು ಈ ಸದನ ಮುಗಿಯುವುದರೊಳಗಾಗಿ ತರುತ್ತೇವೆ' ಇದನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆಶ್ರಯ ಸಮಿತಿ ಕುರಿತಂತೆ ಹೌಸ್‌ನಲ್ಲಿ ತಾವು (ಉಪಮುಖ್ಯಮಂತ್ರಿ) ಹೇಳಿರುವುದು. ಇದನ್ನು ಈ ಸೆಶನ್‌ನೊಳಗೆ ಮಾಡುತ್ತೇವೆಂದು ಹೇಳಿದ್ದೀರಿ. ಆ ಅಮೆಂಡ್‌ಮೆಂಟ್ ಅನ್ನು ಮಂಡಿಸಿ ಎಂದು

ಕೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ: ಅವೊತ್ತು ಇದರ ಬಗ್ಗೆ ಒಂದು ಸಭೆ ಕರೆದಿದ್ದಾಗ ಮಾತ ನಾಡಿದ್ದೇವೆ. ನಿಮ್ಮ ಜೊತೆ ಮಾತನಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಮತ್ತು ಸ್ವಲ್ಪ ದಿವಸ ನಮಗೆ ಸಮಯಾವಕಾಶ ಕೊಡಿ, ತಿದ್ದುಪಡಿ ತರುತ್ತೇವೆಂದು ಹೇಳಿದ್ದಾರೆ. ಅವೊತ್ತು ಮಾತನಾಡುವಾಗ ಇವರೆಲ್ಲರೂ ಇದ್ದರು. ವಿರೋಧ ಪಕ್ಷದ ಮುಖಂಡರೆಲ್ಲರೂ ಇದ್ದರು. ಹೇಳಿರುವುದು ನಿಜ. ಇಲ್ಲವೆಂದು ನಾನು ಹೇಳಿದೆನೇ?

ಶ್ರೀ ಜೆ.ಸಿ.ಮಾಧುಸ್ವಾಮಿ: ಅಷ್ಟೇ ನಮಗೆ ಬೇಕಾಗಿರುವುದು.

ಶ್ರೀ ಸಿದ್ದರಾಮಯ್ಯ: ಹೇಳಿರುವುದು ನಿಜ. ಈ ಸದನ ಮುಗಿಯುವುದರೊಳಗೆ ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದೇವೆ. ಅಧ್ಯಕ್ಷರೆ ಇದನ್ನು ತರುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅಲ್ಲಿಯವರೆಗೂ ಅಸೆಂಬ್ಲಿ ನಡೆಯುತ್ತದೆಯೇ?

ಶ್ರೀ ಸಿದ್ದರಾಮಯ್ಯ: ಇಲ್ಲ

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಅಲ್ಲಿಯವರೆಗೂ ಅಸೆಂಬ್ಲಿ ನಡೆಸುವುದಾದರೆ ನಮ್ಮದೇನೂ ತಕರಾರಿಲ್ಲ. ಅಧಿವೇಶನ ಮುಗಿಯುವುದರೊಳಗೆ ತಂದರಾಯಿತು.

ಶ್ರೀ ಕೆ.ಎಸ್.ಈಶ್ವರಪ್ಪ: ಅಧ್ಯಕ್ಷರೆ, ನಾನು ನಿನ್ನೆ ಮಾತನಾಡಿದ್ದು ಅದನ್ನೇ, ಮತ್ತು ಈಗಲೂ ಮಾತನಾಡುತ್ತಿರುವುದೂ ಅದನ್ನೇ. ನಿನ್ನೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲದಿರುವ ಸಂದರ್ಭದಲ್ಲಿ ಕಂದಾಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಮಾತನಾಡುತ್ತಾ ನಾವು ಆ ರೀತಿ ಹೇಳಿಯೇ ಇಲ್ಲ. ನಾವು ಆ ರೀತಿ ಆಶ್ವಾಸನೆ ಕೊಟ್ಟಿಲ್ಲವೆಂದು ಹೇಳಿದರು.

ಶ್ರೀ ಸಿದ್ಧರಾಮಯ್ಯ: ಅವರು ಹೇಳಿದ್ದಿರಬಹುದು ಆದರೆ ನಾನು ಹೇಳಿದ್ದೇನಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ತುಂಬಾ ಸಂತೋಷ

ಶ್ರೀ ಸಿದ್ದರಾಮಯ್ಯ: ನಾನು ಏನು ಹೇಳಿದ್ದೇನೆ, ಅದನ್ನು ಈಗ ಬದಲಾಯಿಸಿಕೊಳ್ಳವುದಕ್ಕಾಗುತ್ತದೆಯೇ?

ಶ್ರೀ ಕೆ.ಎಸ್.ಈಶ್ವರಪ್ಪ: ಅದಕ್ಕೋಸ್ಕರ ನಾವು ಅದನ್ನೇ ಅವರಿಗೆ ಹೇಳಿದ್ದು. ಸನ್ಮಾನ್ಯ ಅಧ್ಯಕ್ಷರೇ, ತಾವು ಆ ಕಾರಣಕ್ಕಾಗಿಯೇ ಸದನವನ್ನು ಅರ್ಧ ಗಂಟೆ ಮುಂದೂಡಿ ಆ ಕುರಿತ ಕಡತವನ್ನು ತರಿಸಬೇಕೆಂದು ಹೇಳಿದ್ದೆವು. ಅವರು ಆಯಿತು ತರಿಸಿ ಎಂದು ಹೇಳಿದರು. ಅವರು ಇಲ್ಲವೆಂದರೂ ತಾವು ಒಪ್ಪಿಕೊಂಡಿರಿ, ತುಂಬಾ

ಸಂತೋಷ. ತಾವು ಹೇಳಿದ್ದಿರಿ ಇದೇ ಸೆಷನ್‌ನಲ್ಲಿ ಮುಗಿಸುತ್ತೇವೆಂದು, ಇದೇ ಅಧಿವೇಶನದಲ್ಲಿ ತಾವು ಒಂದು ತಿದ್ದುಪಡಿ ತಂದು ಆಶ್ರಯ ಸಮಿತಿಗೆ ಅಧ್ಯಕ್ಷರನ್ನು ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಿರಿ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು): ತಿದ್ದುಪಡಿ ಮಾಡಬೇಕೆಂಬ ಅಭಿಪ್ರಾಯವಿದೆ ಎಂದು ಹೇಳಿದ್ದು.

ಶ್ರೀ ಕೆ.ಎಸ್.ಈಶ್ವರಪ್ಪ: ಇಲ್ಲಾ. ನೋಡಿ, ಇನ್ನು ಓದಿ, ತಾವೇ ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ: ಆಯಿತು. ನಿಜ ಒಪ್ಪಿಕೊಂಡಿದ್ದೇವೆ, ಇದಾದಮೇಲೆ ಈ ಸ್ಟೇಟ್‌ಮೆಂಟನ್ನು ನಾನು ಮಾಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳೂ ತಾವು ಕರೆದಿದ್ದಂಥ ಸಭೆಯಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳ ಮುಂದೆ ಸ್ವಲ್ಪ ಕಾಲಾವಕಾಶ ನಮಗೆ ಬೇಕು ಎಂದು ಹೇಳಿದರು. ಆವತ್ತು ಇವರು ಯಾವುದಕ್ಕೂ ಕೂಡ ನಾವು ಕಾಲಾವಕಾಶ ಕೊಡುತ್ತೇವೆ, ಇಲ್ಲಾ ಎಂದು ಪ್ರಸ್ತಾಪವನ್ನು ಮಾಡಲಿಲ್ಲ, ಒಂದು ರೀತಿ ಒಪ್ಪಿಗೆ ಸೂಚಿಸಿದ ರೀತಿ ಇವರದ್ದೆಲ್ಲಾ ಇತ್ತು. ಆವತ್ತು ಯಡಿಯೂರಪ್ಪನವರು ನೀವೂ ಇದ್ದಿರಿ, ಈಶ್ವರಪ್ಪನವರು ಇದ್ದರೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಅದನ್ನು ಸ್ವಲ್ಪ ಚರ್ಚೆ ಮಾಡಬೇಕಾಗುತ್ತದೆ. ಕ್ಯಾಬಿನೆಟ್‌ನಲ್ಲಿ ಆ ಚರ್ಚೆ ಮಾಡಿ ಅದಕ್ಕೆ ತಿದ್ದುಪಡಿ ತರಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅಸೆಂಬ್ಲಿ ಮುಂದೆ ತರುತ್ತೇವೆ ಈ ಸಲ ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ: ಆಯಿತು. ಈಗ ಏನಾಗಿದೆ ಎಂದರೆ ಇದು ಸಮ್ಮಿಶ್ರ ಸರ್ಕಾರ, ಸಮ್ಮಿಶ್ರ ಸರ್ಕಾರದಲ್ಲಿ ನಾನು ಹೇಳಿರುವುದು ನಿಜ. ಕೆಲವು ತೊಡುಕುಗಳು ಇದ್ದಾವೆ. ಅದು ನಿವಾರಣೆಯಾಗಬೇಕಾಗುತ್ತದೆ. ಅದಕ್ಕೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ we will take a decision.

ಶ್ರೀ ಜೆ.ಸಿ.ಮಾಧುಸ್ವಾಮಿ: ಹಾಗಾದರೆ ಪ್ರತಿಯೊಂದು ಇಲಾಖೆಗೆ ಇಬ್ಬಿಬ್ಬರು ಸೆಕ್ರೆಟರಿಗಳನ್ನು ಮಾಡಿಬಿಡಿ. ನಿಮ್ಮ ಪಕ್ಷದ ಒಬ್ಬರು. ಅವರ ಪಕ್ಷದ ಒಬ್ಬರು. ಆಗ ಸಮ್ಮಿಶ್ರ ಸರ್ಕಾರವಲ್ಲ. ಅವರ ವ್ಯೂಸೆಲ್ಲಾ ತೆಗೆದುಕೊಂಡು.....

ಶ್ರೀ ಸಿದ್ದರಾಮಯ್ಯ: ಜನರು ಈ ರೀತಿ ತೀರ್ಪು ಕೊಟ್ಟುಬಿಟ್ಟಿದ್ದಾರಲ್ಲಾ ಏನು ಮಾಡುವುದು?

ಶ್ರೀ ಜೆ.ಸಿ.ಮಾಧುಸ್ವಾಮಿ: ಜನರು ಅದಕ್ಕೆ ಕೊಟ್ಟಿರಲಿಲ್ಲ, ಓಟು ನೀವು ಅವರಿಗೆ ವಿರುದ್ಧವಾಗಿರುತ್ತೀರಿ ಎಂದು ಕೊಟ್ಟಿದ್ದು. ನೀವು ಹೋಗಿ ಅವರ ಜೊತೆ ಸೇರಿಕೊಂಡು ಜನರು ಕೊಟ್ಟಿದ್ದಾರೆ ಜನರು ಕೊಟ್ಟಿದ್ದಾರೆ ಎಂದರೆ...

ಶ್ರೀ ಸಿದ್ದರಾಮಯ್ಯ: ಜನರು ನಮಗೇ ಕೊಟ್ಟಿದ್ದರೆ ನಾವು ಮಾಡುತ್ತಿದ್ದೆವು. ಅವರಿಗೆ ಕೊಟ್ಟಿದ್ದರೆ ಅವರು ಮಾಡುತ್ತಿದ್ದರು. ನಿಮಗೇ ಕೊಟ್ಟಿದ್ದರೆ ನೀವು ಮಾಡುತ್ತಿದ್ದಿರಿ. ಬಿಜೆಪಿಗಂತು ಕೊಡುತ್ತಿರಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವರ ಜೊತೆ ಸೇರಿಕೊಳ್ಳುತ್ತೀವೆಂದು ಜನಕ್ಕೆ ನೀವು ಹೇಳಿದ್ದೀರ? ನಿಮಗೇನು ಜನ ಅವರ ಜೊತೆ ಸೇರಲು ಕೊಟ್ಟುಬಿಟ್ಟಿಲ್ಲವಲ್ಲ. ನೀವು ಓಡೋಗಿ ಸೇರಿಕೊಂಡುಬಿಟ್ಟರೆ ಜನಕ್ಕೆ ಅವಮಾನ ಮಾಡಿ, ಜನ ಕೊಟ್ಟಿದ್ದಾರೆ, ಜನ ಕೊಟ್ಟಿದ್ದಾರೆ ಎಂದರೆ ನೀವು ಜನಕ್ಕೆ ಅವಮಾನ ಮಾಡಿ ಅವರ ಜೊತೆ ಸೇರಿಕೊಂಡಿರುವುದು.

ಶ್ರೀ ಸಿದ್ದರಾಮಯ್ಯ: ಇಲ್ಲ ಜನರಿಗೆ ಗೌರವ ಸೂಚಿಸುವುದಕ್ಕೋಸ್ಕರವೇ ಈ ರೀತಿ ಮಾಡಿರುವುದು. ಜನರ ತೀರ್ಪಿಗೆ ತಲೆಬಾಗಬೇಕು ಎಂಬ ಕಾರಣಕ್ಕೋಸ್ಕರವೇ ಈ ರೀತಿ ಮಾಡಿರುವುದು.

ಶ್ರೀ ಆರ್.ಅಶೋಕ್: ಜನರು ನಮಗೆ ಆಯ್ಕೆ ಮಾಡಿರುವುದು, ತಮ್ಮನ್ನು ಮೂರನೇ ಪ್ಲೇಸ್‌ಗೆ ಹಾಕಿದ್ದಾರೆ.

ಶ್ರೀ ಸಿದ್ದರಾಮಯ್ಯ: ನಾವೂ, ಕಾಂಗ್ರೆಸ್‌ನವರು 25–30 ವರ್ಷ ಹೋರಾಟ ಮಾಡಿಕೊಂಡು ಬಂದಿದ್ದರೂ ಜನರ ತೀರ್ಪು ನೀವಿಬ್ಬರೂ ಸರ್ಕಾರ ಮಾಡಿ ಅಂತ ಹೇಳಿದ್ದರಿಂದ ಮತ್ತು ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರಬಾರದು ಎಂಬ ಕಾರಣಕ್ಕಾಗಿ ನಾವು ಅಧಿಕಾರ ಮಾಡಿದ್ದೇವೆ ಹೊರತು ಹಾಗೆಂದು ಇಬ್ಬರು ಸೆಕ್ರೆಟರಿ ನಾಲ್ಕು ಜನ ಸೆಕ್ರೆಟರಿ ಮಾಡುತ್ತೇವೆಂದು ಹೇಳಿದ್ದೇವಾ? ಒಬ್ಬರೇ ಸೆಕ್ರೆಟರಿ ಒಬ್ಬರೇ ಮಿನಿಸ್ಟರ್.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ: ನಮಗೆ ಕೊಟ್ಟಿರುವ ಭರವಸೆಯನ್ನು ಈಡೇರಿಸುತ್ತೀರೋ ಇಲ್ಲವೋ ಹೇಳಿ, ಅಧಿಕಾರದಲ್ಲಿ ನೀವೆ ಇರಿ, ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಆ ರೀತಿ ಹೇಳಿರುವುದು ಸತ್ಯ. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಆ ರೀತಿ ಹೇಳಿರುವುದು ಸತ್ಯ ರೆಕಾರ್ಡ್‌ನಲ್ಲಿದೆ. ಹೇಳಿದ್ದೇನೆ, it is also recorded ಅದರ ಬಗ್ಗೆ ಎರಡನೇ ಮಾತಿಲ್ಲ, ಆವತ್ತು ಮುಖ್ಯಮಂತ್ರಿಗಳು ತಾವು ಕರೆದಿದ್ದ ಸಭೆಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದರು, ನಮಗೆ ಸ್ವಲ್ಪ ಕಾಲಾವಕಾಶ ಬೇಕು, ಅದರಿಂದ ಇದಕ್ಕೆ ಒತ್ತಾಯ ಮಾಡಬೇಡಿ ಎಂದು ಹೇಳಿದರು. ನಾನು ಅರ್ಥ ಮಾಡಿಕೊಂಡ ಮಟ್ಟಿಗೆ ಇವರು ಒಂದು ರೀತಿ ಒಪ್ಪುವಂಥ ರೀತಿ ಇತ್ತು ಅವರು ಮಾತನಾಡಿದ್ದು, ಆ ಕಾರಣದಿಂದ

ಮತ್ತೆ ನಾವೇನು ಹಿಂದಕ್ಕೆ ಹೋಗುತ್ತೇವೆಂದಲ್ಲ. we need some time. we require some time. ನಾವು ಅದನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ we will come back. ನಾವು ಇನ್ನೊಂದು ಸಾರಿ ಅದನ್ನು ತಿದ್ದುಪಡಿ ಮಾಡಿ ಏನು ಮಾಡಬೇಕು ತೀರ್ಮಾನ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇದರಲ್ಲಿ ಎರಡು ಭಾಗ ಇದೆ. ಒಂದು ಮಾಡಲು ಹೋಗುತ್ತಿರುವುದು ಇನ್ನೊಂದು ಈ ಅಧಿವೇಶನದಲ್ಲೇ ಮಾಡುತ್ತೇವೆ ಎಂದಿರುವುದು. ಅಸೆಂಬ್ಲಿ ಮುಂದೆ ಈ ಅಧಿವೇಶನದಲ್ಲೇ ಮಾಡುತ್ತೇವೆಂದು ಸ್ಪಷ್ಟವಾದ ಆಶ್ವಾಸನೆ ಅವರದ್ದು ಇದೆ. ಅದಕ್ಕೆ ಅವರು ಉತ್ತರ ಹೇಳಬೇಕಲ್ಲಾ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ನಿನ್ನೆ ದ್ರೋಹಿಗಳು, ಬಡವರ ವಿರೋಧಿಗಳು ಏನೇನೂ ಪದಪುಂಜಗಳನ್ನು ಬಳಸಬೇಕಾಗಿತ್ತೋ ಅದು ಜಕ್ಕಣ್ಣರಾಯನ ಕೆರೆಯ ಭಾಷಣವೇ ಇಲ್ಲಿ ಆಯಿತು. ತಾವು ಅಧಿವೇಶನದಲ್ಲಿ ಮಾಡುವುದಾಗಿ ಮಾತು ಕೊಟ್ಟಿದ್ದೀರಿ, ಹಾಗೆ ಮಾಡಿದ್ದೀರಿ, ಹೀಗೆ ಮಾಡಿದ್ದೀರಿ ಎಂದು ಹೇಳಿ, ಆದರೆ ಆಗ ಕಂಟೆಕ್ಸ್ಟ್ ಏನಿದೆ ಎನ್ನತಕ್ಕದನ್ನು ತಾವು ನೋಡಿ ಅಂಜನಾಮೂರ್ತಿಯವರು ಉತ್ತರವನ್ನು ಕೊಡುತ್ತಿದ್ದರು. ಈ ವಿಚಾರದಲ್ಲಿ ಪ್ರಸ್ತಾಪವಾಯಿತು. ಮಾನ್ಯ ಅಂಜನಾಮೂರ್ತಿಯವರು ಹೇಳುತ್ತಿರುವ ಮಾತನ್ನು ಓದುತ್ತಿದ್ದೇನೆ, ಮಾನ್ಯ ಅಧ್ಯಕ್ಷರೆ ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಂದಾಯ ಸಚಿವರನ್ನು ಹಿರಿಯ ಮಂತ್ರಿಗಳಾದ ಸಿಂಧ್ಯಾರವರನ್ನು, ಖರ್ಗೆಯವರನ್ನು ಹೆಚ್.ಕೆ.ಪಾಟೀಲ್‌ರ ನೇತೃತ್ವದಲ್ಲಿ ಒಂದು ಸಂಪುಟ ಉಪಸಮಿತಿ ರಚನೆಯಾಗಿದೆ. ಅವರು ಒಂದು ವರದಿ ನೀಡಿದ ನಂತರ ಕಾನೂನಿನ ಸಾಧಕಬಾಧಕದ ಬಗ್ಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಕಾರಣ ಅದರ ಸಂಪೂರ್ಣ ಜವಾಬ್ದಾರಿಯನ್ನು ಪಂಚಾಯಿತಿಗೆ ವಹಿಸಲು ಕಳೆದ 2004ರಲ್ಲಿ ಈ ಸದನವೇ ತೀರ್ಮಾನ ಮಾಡಿದೆ. ಆದ್ದರಿಂದ ಈ ರೀತಿ ಸದನದಲ್ಲೇ ತೀರ್ಮಾನವಾಗಿರುವುದರಿಂದ ನಾವು ಏಕಾಏಕಿ ಮಾಡುವುದಕ್ಕೆ ಆಗದಿರುವುದರಿಂದ ಕಾನೂನಿನ ಕೆಲವು ತೊಡಕುಗಳು ಇರುವುದರಿಂದ ಸಾಧಕಬಾಧಕಗಳನ್ನು ಚರ್ಚಿಸಿ ಸಂಪುಟ ಉಪಸಮಿತಿ ಕೊಡುವಂಥ, ವರದಿಯ ಆಧಾರದ ಮೇಲೆ ಆದಷ್ಟು ಜಾಗ್ರತೆ ಕ್ರಮಕೈಗೊಳ್ಳುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಯಪಡಿಸುತ್ತೇನೆ. ಆಗ ಜಯಪ್ರಕಾಶ್ ಹೆಗ್ಡೆಯವರು, ಒಂದು ವರ್ಷದಿಂದ ಮನೆಗಳನ್ನು ಕೊಟ್ಟಿಲ್ಲ, ಇವರು ಸರ್ಕಾರದ ಕಡೆಯಿಂದ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತಾರೊ ಗೊತ್ತಿಲ್ಲವೆಂದು ಹೇಳಿದ ತಕ್ಷಣವೇ ಗೊಂದಲ ಉಂಟಾಗುತ್ತದೆ. ಗೊಂದಲ ಉಂಟಾದಂಥ ಸಂದರ್ಭದಲ್ಲಿ

ಮಾನ್ಯ ವಿರೋಧ ಪಕ್ಷದ ನಾಯಕರು: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು

ಗಮನಿಸಬೇಕು, ಇದು ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮ ಒಪ್ಪಿಗೆಯಾಗಿರುವಂಥದ್ದು, ಇದು ನಮ್ಮ ಹಿರಿಯ ಮಂತ್ರಿಗಳಾದ ಎಂ.ಪಿ. ಪ್ರಕಾಶ್‌ರವರಿಗೂ ಗೊತ್ತಿದೆ. ಶಾಸಕರನ್ನು ಆಶ್ರಯ ಸಮಿತಿಗೆ ಅಧ್ಯಕ್ಷರನ್ನಾಗಿ ಮಾಡಲು ಪಂಚಾಯಿತ್‌ರಾಜ್ ಬಿಲ್ಲಿಗೆ ಅಮೆಂಡ್‌ಮೆಂಟ್ ತರಬೇಕಷ್ಟೆ ಎಂದು ಹೇಳುತ್ತಾರೆ. ಮಾನ್ಯ ಅಂಜನಮೂರ್ತಿಯವರು ಹೇಳುತ್ತಾರೆ. ಮಾನ್ಯ ಅಧ್ಯಕ್ಷರಲ್ಲಿ ನಾನು ಮನವಿ ಮಾಡುತ್ತೇನೆ, ಕೂಡಲೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಬಿಲ್ಲನ್ನು ತನ್ನಿ ಎಂದು ಅವರು ಹೇಳುವುದರಲ್ಲಿ ಮತ್ತೆ ಗೊಂದಲ ಪ್ರಾರಂಭವಾಗುತ್ತದೆ. ಆ ರೀತಿ ಗೊಂದಲ ಶುರುವಾದಾಗ ಮಾನ್ಯ ವಿರೋಧ ಪಕ್ಷದ ನಾಯಕರು ನಾನೂ ಕೂಡ ಅಲ್ಲಿದ್ದೆ, ಮುಖ್ಯಮಂತ್ರಿಗಳೂ ಒಪ್ಪಿದ್ದಾರೆ ಎಂದು ಹೇಳಿದ ಸಂದರ್ಭದಲ್ಲಿ ನನ್ನ ಉತ್ತರ, ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರವನ್ನು ಚರ್ಚೆ ಮಾಡಿದ ಮೇಲೆ ಈ ಕಾನೂನಿನ ತೊಡಕಿನ ವಿಚಾರದಲ್ಲಿ ವಿವರವಾದಂಥದ್ದು ಆಗಬೇಕೆಂದು ಸಚಿವಸಂಪುಟ ಉಪಸಮಿತಿ ಮಾನ್ಯ ಉಪಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಆಗಿದೆ, ಪ್ರಾಯಶಃ ಇನ್ನು ಎರಡು ದಿವಸಗಳಲ್ಲಿ ಮಾಡಿ ಈ ಅಧಿವೇಶನದಲ್ಲಿ ಅಂಥ ವಿಚಾರಗಳನ್ನು ಕೊಟ್ಟಂಥ ಭರವಸೆಯನ್ನು ನೆರವೇರಿಸಲಿಕ್ಕೆ ನಾವು ಕ್ರಮ ಕೈಗೊಳ್ಳುವುದರ ಬಗ್ಗೆ ತಮ್ಮ ಹತ್ತಿರ ಮಾತನಾಡುತ್ತೇವೆ. ಇದು ನಾನು ಹೇಳಿರತಕ್ಕದ್ದು. ನಾನು ಭರವಸೆ ಕೊಟ್ಟಿದ್ದೇನೆ. ಬಡವರ ದ್ರೋಹಿಗಳು ಈ ಸರ್ಕಾರ, ನೀವು ಮಾತನಾಡಿದ ಮಾತನ್ನು ಕದಿಯುತ್ತಿದ್ದೀರಿ, ಈ ರೀತಿಯ ಪದಗಳನ್ನೆಲ್ಲಾ ಬಳಸಿ ನಮ್ಮನ್ನು ಹೊಗಳಲೂ ಬಿಡುವುದಿಲ್ಲ. ಈ ರೀತಿಯಾಗಿ ಪ್ರವೋಕ್ ಮಾಡುತ್ತಾರೆ, ಮಧ್ಯದಲ್ಲಿ ಇಂಟರ್‌ಫಿಯರ್ ಆಗಿ ಎಂದು ಹೇಳುತ್ತಾರೆ. ಇಂಟರ್‌ಫ್ರಿಯರ್ ಆಗಿ ಎಂದು ಹೇಳಿದಾಗ ಏನೋ ನಾಳೆ ನನ್ನ ಮೇಲೆ ಪ್ರಿವಿಲೇಜಸ್ ಬರುತ್ತದೇನೋ ಎಂದು ಗಾಬರಿಯ ವಾತಾವರಣ ನಿನ್ನೆ ಸೃಷ್ಟಿಯಾಯಿತು. ನಾನೇನೊ ಹೇಳಿ ಮಾತನ್ನು ಕದ್ದಿದ್ದೇನೆ ಎನ್ನುವಂತೆ ತಮ್ಮ ಹತ್ತಿರ ಬಂದು ಮಾತನಾಡುತ್ತೇವೆಂದು ಹೇಳಿದ್ದೇವೆ. ಸರ್ಕಾರ ನಿರ್ಣಯ ತೆಗೆದುಕೊಳ್ಳದೆಯೇ ನಾವೇನು ಯಾರು ಕೂಡ ಒಬ್ಬ ವ್ಯಕ್ತಿ ಒಂದು ಸದನದಲ್ಲಿ ಒಬ್ಬ ಸಚಿವನಾಗಿ ಇರತಕ್ಕವನಷ್ಟೆ. ಪಾಲಿಸಿ ನಿರ್ಣಯವಾಗಬೇಕಾದಾಗ ಸಚಿವ ಸಂಪುಟದಲ್ಲಿ ನಿರ್ಧಾರವಾಗುತ್ತದೆ. ಈ ಬಗ್ಗೆ ನಾನು ಪದೇ ಪದೇ ತಮ್ಮಲ್ಲಿ ಅರಿಕೆ ಮಾಡಿಕೊಂಡಿದ್ದೇನೆ, ಈ ಸದನದ ಈ ಭಾಗದಲ್ಲಿ ಆ ಭಾಗದಲ್ಲಿ ಇರತಕ್ಕಂಥ ಪ್ರತಿಯೊಬ್ಬರೂ ಶಾಸಕರು ಅಧ್ಯಕ್ಷರಾಗಬೇಕೆಂದು ಬಯಸುತ್ತಿದ್ದಾರೆ. ಈ ವಿಚಾರದಲ್ಲಿ ಯೋಚನೆ ಮಾಡಬೇಕಾಗುತ್ತದೆ. ಅನೇಕ ಪರ್ಯಾಯ ಸಲಹೆಗಳು ಇವೆ. ಮಾನ್ಯ ಹಿರಿಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರ ಹತ್ತಿರ ಮಾತನಾಡಿದ ಮೇಲೆ ನಿನ್ನೆ ಕೂಡ ನಾವು ಒಂದು ಯೋಜನೆಯನ್ನು ಮಾಡಿದ್ದೇವೆ. ಗ್ರಾಮಸಭೆಯಿಂದ

ರೆಕಮೆಂಡ್ ಆಗಿ ಬಂದಿರತಕ್ಕದ್ದು. ಈ ಸಮಿತಿಯ ಅಧ್ಯಕ್ಷರನ್ನಾಗಿ ಶಾಸಕರಾಗಿ ಮಾಡಿರತಕ್ಕದ್ದರ ಬಗ್ಗೆ, ಪಂಚಾಯಿತಿಯವರೆ ಯಾವುದನ್ನು ಶಿಫಾರಸ್ಸು ಮಾಡಿರುತ್ತಾರೆ ಆ ಶಿಫಾರಸ್ಸು ಮಾಡಿರತಕ್ಕದ್ದು ಮತ್ತು ಸಚಿವರ, ಶಾಸಕರ ಅಧ್ಯಕ್ಷತೆಯಲ್ಲಿರತಕ್ಕ ಸಮಿತಿಯ ಮುಂದೆ ಬಂದು ಆ ಬಗ್ಗೆ ಕೂಡ ಚರ್ಚೆ ಮಾಡಿಕೊಂಡು ನಿರ್ಣಯ ತೆಗೆದುಕೊಳ್ಳಬಹುದು. ಬಿಪಿಎಲ್ ಲಿಸ್ಟ್‌ನೊಳಗೆ ಇದ್ದರೆ ಅದರ ಬಗ್ಗೆ ಕೂಡ ನಾವು ಸಹಾನುಭೂತಿಯಿಂದ ಯೋಚನೆ ಮಾಡುತ್ತೇವೆಂದು ನಿನ್ನೆ ಹೇಳಿಕೊಂಡಿರತಕ್ಕದ್ದು ಆದ್ದರಿಂದ ಈ ವಿವಾದಕ್ಕೆ ತೆರೆಯನ್ನು ಇಲ್ಲಿಗೆ ತೆಗೆಯಬೇಕು. ಆದರೆ ಹಿರಿಯ ಸದಸ್ಯರಾದ ಮಾನ್ಯ ಈಶ್ವರಪ್ಪನವರನ್ನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ, ತಾವು ಅಂಥ ದೊಡ್ಡ ದೊಡ್ಡ ಭಾಷೆಗಳನ್ನು ದಯವಿಟ್ಟು ಬಳಸಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ, ಯಾರೂ ದ್ರೋಹಿಗಳಲ್ಲ ಯಾರೂ ಬಡವರ ವಿರೋಧಿಗಳಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಒಂದನ್ನು ತಕರಾರಿಗೆ ತೆಗೆದುಕೊಳ್ಳುತ್ತೇನೆ. ತಾವು ಒಬ್ಬ ವ್ಯಕ್ತಿಯಾಗಿ ಉತ್ತರ ಕೊಡುತ್ತೇವೆಂದು ಮಿನಿಸ್ಟರ್ ಆಗಿ ಹೇಳುವುದಕ್ಕೆ ಈ ಸಭೆಯಲ್ಲಿ ಅವಕಾಶ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಆ ರೀತಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: No, No. ತಾವು ಈಗ ಹೇಳಿದಿರಿ I am very sorry

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್: ನಾನು ಈಗ ಹೇಳಿದ್ದು ಇಂಟರ್‌ವಿಯನ್ ಆಗಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನವಾಗದೆಯೇ ಒಬ್ಬ ಮಂತ್ರಿಯಾಗಿ ಹೇಳತಕ್ಕದ್ದು ಆಗುವುದಿಲ್ಲ. ಇದಕ್ಕೆ ನಾನು ಹೇಳುತ್ತೇನೆ ತಮ್ಮೊಡನೆ ಮತ್ತೆ ಬಂದು ಮಾತನಾಡುತ್ತೇವೆ ಎಂದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಆ ಮಾತಿಗೇ ನಾನು ತಕರಾರು ತೆಗೆದುಕೊಳ್ಳುತ್ತಿದ್ದೇನೆ. ಒಬ್ಬರು ಮಂತ್ರಿ ನಿಂತುಕೊಂಡು ಶಾಸನಸಭೆಯಲ್ಲಿ ಉತ್ತರ ಹೇಳಿದರೆ ನಾವು ಅದು ಸರ್ಕಾರದ ಉತ್ತರವೆಂದು ಭಾವಿಸಿಕೊಳ್ಳುತ್ತೇವೆ. ಹಾಗೆಯೇ ಕಡತದ ಮೇಲೆ ತೆಗೆದುಕೊಳ್ಳುತ್ತೇವೆ. ತಮ್ಮ ಅಭಿಪ್ರಾಯವನ್ನು ಇಲ್ಲಿ ಮಿನಿಸ್ಟರ್ ಆಗಿ ಹೇಳಲು ಇಲ್ಲಿ ಅವಕಾಶ ಇಲ್ಲ. ಶಾಸನ ಸಭೆಯ ನಿಯಮಗಳ ಪ್ರಕಾರ Individual opinion of the minister cannot be considered here. ನಾನು ಪದೇ ಪದೇ ಕೇಳುತ್ತಿದ್ದೇನೆ,

ಶಾಸನ ಸಭೆ ಶುರುವಾದಾಗಿನಿಂದಲೂ ನಾವು ಮಿನಿಸ್ಟರ್‌ಗಳಿಗೆ ಇದನ್ನೇ ಕೇಳುವುದು.

ಅಧ್ಯಕ್ಷರು: ಅವರು ಅಭಿಪ್ರಾಯವನ್ನು ಹೇಳಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅದಕ್ಕೆ ಅವಕಾಶ ಇಲ್ಲ ಸ್ವಾಮಿ. I am very sorry. ಅವರ ಅಭಿಪ್ರಾಯವನ್ನು ಇಲ್ಲಿ ಹೇಳಲು ಅವಕಾಶ ಇಲ್ಲ. ಅದು ತೀರ್ಮಾನವಾಗಬೇಕು.

ಅಧ್ಯಕ್ಷರು: ಮುಖ್ಯಮಂತ್ರಿಗಳು ಇಲ್ಲ.

ಶ್ರೀ ಎಂ.ಪಿ.ಪ್ರಕಾಶ್: I cannot abrogate myself the power of the cabinet, unless the cabinet takes decision I cannot myself take a decision, My statement is crystal clear.

ಶ್ರೀ ಜೆ.ಸಿ.ಮಾಧುಸ್ವಾಮಿ: If a minister replies in the House it will be take as the decision of the government. It cannot be taken as individual opinion.

(Interruption)

ಇದು ಶಾಸನಸಭೆ, How can you take this as individual opinion? ಹಾಗಾದರೆ ನಾಳೆಯಿಂದ ತೀರ್ಮಾನ ಮಾಡಿ. ಯಾವ ಮಿನಿಸ್ಟರ್ ರಿಪ್ಲೈಯೂ...

(ಗೊಂದಲ)

ಅಧ್ಯಕ್ಷರು: ಇದೇನು?

(ಗೊಂದಲ)

ಶ್ರೀ ಎಂಪಿ. ಪ್ರಕಾಶ್: What is the reply? you read the reply.

(ಗೊಂದಲ)

ಅಧ್ಯಕ್ಷರು: what is this? I cannot understand.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಅವರು ಹೇಳಿದ್ದರ ಅರ್ಥ ಏನೆಂದರೆ ನಮ್ಮ ಕಡೆಯ ಸದಸ್ಯರೂ ಕೂಡ ಅದೇ ಭಾವನೆ ಇಟ್ಟುಕೊಂಡಿದ್ದಾರೆ ತಮ್ಮಲ್ಲೂ ಕೂಡ ಅದೇ ಇದೆ. ಇಡೀ ಸದನದಲ್ಲಿ ಇರತಕ್ಕಂಥ ಸದಸ್ಯರ ಇಚ್ಛೆ ಏನಿದೆ ಎಂದರೆ, ಆಶ್ರಯ ಕಮಿಟಿ ಹಿಂದೆ ಯಾವ ರೀತಿಯಾಗಿ ಇತ್ತೋ ಅದೇ ರೀತಿಯಾಗಿ ಕಂಟಿನ್ಯೂ ಆಗಿ ಇರಬೇಕು ಮುಂದುವರೆಸಬೇಕು ಎನ್ನತಕ್ಕಂಥ ಭಾವನೆ

ಇದೆ. ವೈಯಕ್ತಿಕವಾಗಿ ನಮ್ಮದು ಇದ್ದರೂ ಕೂಡ ಇದು policy decision ಆದ್ದರಿಂದ ಇದರ ಬಗ್ಗೆ cabinet ಮಾಡಬೇಕಾಗುತ್ತದೆ ಅನ್ನತಕ್ಕಂಥ ಮಾತನ್ನು ಅವರು ಹೇಳಿದರು. ಅದಕ್ಕೆ ತಾವು ಇದು ಅವರ individual opinion, ಅದು ನಮಗೆ ಬೇಕಾಗಿಲ್ಲ, ಇಲ್ಲಿ ಏನೇ ಹೇಳಿದರೂ ಇದು ಸರ್ಕಾರದ್ದೇ ಎಂದು ನಾವು ತಿಳಿದು ಕೊಳ್ಳುತ್ತೇವೆ " ಎಂದು ಹೇಳುತ್ತಿದ್ದೀರಿ. All right ಇದು government ನಿರ್ಣಯ ಅಥವಾ government ಮಾತು ಎಂದು ನೀವು ತೆಗೆದುಕೊಳ್ಳಬೇಕಾದರೆ, ಅವರು " ನಾವು ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ, ಮುಂದೆ ಬರುತ್ತೇವೆ " ಅನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇದೇ ಸರ್ಕಾರದ ನಿರ್ಣಯ. ಮಾತನಾಡಿ ನಿಮ್ಮ ಮುಂದೆ ಬರುತ್ತೇವೆ, ನಿಮ್ಮನ್ನೂ ಕರೆಸಿ ನಿಮ್ಮನ್ನು consult ಮಾಡುತ್ತೇವೆ ಎನ್ನತಕ್ಕಂಥ ಮಾತೇನೂ ಹೇಳಿದ್ದಾರೋ, ಇದೇ ಸರ್ಕಾರದ ನಿರ್ಧಾರ ಎಂದು ತೆಗೆದುಕೊಳ್ಳಿ ಏಕೆ ನೀವು ಇದು ಮಾಡುತ್ತೀದ್ದೀರಿ?....

(ಗೊಂದಲ)

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೇ, ಇಲ್ಲಿ ಒಂದೇ ಒಂದು ಪ್ರಶ್ನೆ ಇದೆ....

(ಗೊಂದಲ)

ಅಧ್ಯಕ್ಷರು: ದಯಮಾಡಿ ಕೇಳಿ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬರಲಿ, ನನ್ನ ಕೊಠಡಿಯಲ್ಲಿ ತಾವೆಲ್ಲಾ ಇದ್ದಾಗ...

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಸಂವಿಧಾನಾತ್ಮಕವಾದಂತಹ ಬಿಕ್ಕಟ್ಟು ಇಲ್ಲಿ ಆರಂಭವಾಗುತ್ತಿದೆ. ಒಬ್ಬ ಮಂತ್ರಿಗಳು ಶಾಸನ ಸಭೆಯಲ್ಲಿ reply ಮಾಡಿ ಅದು ಸರ್ಕಾರದ reply ಅಲ್ಲ ಎಂದು ಹೇಳಿದರೆ ಹೇಗಾಗುತ್ತದೆ?....

ಅಧ್ಯಕ್ಷರು: ಅದು ಸಂವಿಧಾನ ಬಿಕ್ಕಟ್ಟೇನು ಆಗುವುದಿಲ್ಲ. That is not the question here. ಇದನ್ನು solve ಮಾಡಬೇಕು ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಬರಲಿ, ಕುಳಿತುಕೊಂಡು ಮಾತಾಡೋಣ. ಈಗ business ನಡೆಯುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಹಾಗಾದರೆ ನಾಳೆ ನಾವು ಯಾರ ಉತ್ತರವನ್ನೂ

ಸಹ ಕೇಳುವುದಿಲ್ಲ...

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಸಂವಿಧಾನಾತ್ಮಕ ಬಿಕ್ಕಟ್ಟು ಇದೆ ಎನ್ನುವಂತಹ ಬೆದರು ಬೊಂಬೆಗಳನ್ನು ಇಲ್ಲಿ ಹೇಳಬೇಕಾದ ಅಗತ್ಯ ಇಲ್ಲ...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಪ್ರಕಾಶ್‌ರವರೇ ಒಂದು ನಿಮಿಷ. ಮೊನ್ನೆ ಅಧಿವೇಶನದಲ್ಲಿ ಇದರ ಬಗ್ಗೆ ಚರ್ಚೆಯಾದಂತಹ ಸಂದರ್ಭದಲ್ಲಿ ನಾನು " ಈ ರೀತಿ ಹೇಳುವುದೆಲ್ಲಾ ಕಥೆ ಹಳೆಯದಾಯಿತು ಸ್ವಾಮಿ ಉಪ ಮುಖ್ಯಮಂತ್ರಿಗಳ ಸಮಿತಿ ವರದಿ ಕೊಡುತ್ತದೆ ಎಂಬ ಇನ್ನೂ ಹಳೆಯ ಕಥೆಯನ್ನೇ ಹೇಳಿದರೆ ಹೇಗೆ? " ಎಂದು ಕೇಳಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಆಗ ಎದ್ದು ನಿಂತುಕೊಂಡು " ಸ್ವಲ್ಪ ಹೊತ್ತು ಎಲ್ಲರು ಕುಳಿತುಕೊಳ್ಳುತ್ತೀರಾ? ಮಾನ್ಯ ಮಾಧುಸ್ವಾಮಿಯವರೇ ನನ್ನ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿ ರಚನೆಯಾಗಿದೆ, ನಾನು ಸಮಿತಿಯ ಸಭೆ ಕರೆದು ಅದನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಲಿಲ್ಲ " ಎಂದರು. ಇದು ಒಂದು ವಿಚಾರ. ಎರಡನೆಯ ದಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಆಶ್ರಯ ಸಮಿತಿ ರಚನೆಯಾಗಬೇಕು ಎಂಬ ಬಗ್ಗೆ ಚರ್ಚೆಯಾದಾಗ, " ಅದರ ಬಗ್ಗೆ ನಾವೂ ಒಪ್ಪಿಕೊಂಡಿದ್ದೇವೆ, ಅದಕ್ಕೆ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳು ಆಗಬೇಕು, ಆ ತಿದ್ದುಪಡಿಗಳನ್ನು ತರುತ್ತೇವೆ, ಆ ತಿದ್ದುಪಡಿಗಳನ್ನು ಈ ಸದನ ಮುಗಿಯುವುದರೊಳಗಾಗಿ ತರುತ್ತೇವೆ " ಎಂದು ಹೇಳಿದರು. ಸ್ವಾಮಿ ತಮ್ಮದೇ ಇದು ದಾಖಲೆ...

ಅಧ್ಯಕ್ಷರು: ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ನಿಮಿಷ ಸಾರ್. ನಾನು ಪೂರ್ತಿ ಮಾಡಿ ಬಿಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ನಿಮಿಷ ನನಗೆ ಪೂರ್ತಿ ಮಾಡುವುದಕ್ಕೆ ಅವಕಾಶ ಕೊಡಿ. ಇಲ್ಲಿ ನನಗೆ ನೋವಾಗುತ್ತಿರುವ ಸಂಗತಿ ಏನೆಂದರೆ Business advisory committeeಯಲ್ಲೂ ಮಾನ್ಯ ಮುಖ್ಯಮಂತ್ರಿಗಳ ಸಮಕ್ಷಮ ನಾವು ಚರ್ಚೆ ಮಾಡಿದೆವು, ಒಪ್ಪಿಕೊಂಡರು. ಇಲ್ಲಿ ಸನ್ಮಾನ್ಯ ಎಂ.ಪಿ.ಪ್ರಕಾಶ್‌ರವರು ಉತ್ತರ

ಕೊಡುವಂತಹ ಕಾಲದಲ್ಲಿ ತಾವೇ ಹೇಳಿದ್ದೀರಿ, ಇದರ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿ ವರದಿ ಬರಬೇಕು, ಅದನ್ನು ತರೋಣ ಮಾಡೋಣ ಎನ್ನುವಂತಹ ಭರವಸೆಯನ್ನು ಕೊಟ್ಟಿದ್ದೀರಿ. ಮಾಧುಸ್ವಾಮಿಯವರು ಹೇಳಿದಂತೆ ಸಚಿವರಾಗಿ ಇಲ್ಲಿ ನಿಂತುಕೊಂಡು ಹೇಳಿದಂತಾದ್ದು assurance ಆಗುತ್ತದೆ. ಅದು ವೈಯಕ್ತಿಕ ಅಭಿಪ್ರಾಯ ಆಗುವುದಿಲ್ಲ. ಎರಡನೆಯದಾಗಿ ಏಕೋ ಏನೋ ಸಿದ್ದರಾಮಯ್ಯನವರೇ ನಮಗಿರುವಂತಹ ನೋವೇನು ಗೊತ್ತೇ? ಸುಮಾರು ಹೆಚ್ಚು ಕಡಿಮೆ 99 ಜನ ನಾವು ವಿರೋಧ ಪಕ್ಷದಲ್ಲಿದ್ದೇವೆ. ಇಷ್ಟೊಂದು ಸಹಕಾರ ಸದನದ ಕಾರ್ಯಕಲಾಪಕ್ಕೆ ನಾವು ಕೊಡುತ್ತಿದ್ದೇವೆ. ಒಬ್ಬ ಶಾಸಕರಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗದಿರುವಂತಹ ಉಸಿರು ಕಟ್ಟುವಂತಹ ಪರಿಸ್ಥಿತಿ ಕಳೆದ 9 ತಿಂಗಳಿನಿಂದ ನಾವು ಅನುಭವಿಸುತ್ತಿದ್ದೇವೆ. ಕೇವಲ ಅದೊಂದೇ ಅಲ್ಲ. ಆರಾಧನಾ ಸಮಿತಿಯನ್ನೂ ಕೂಡ 9 ತಿಂಗಳಾದರೂ ನಿಮಗೆ ಮಾಡಲಿಕ್ಕಾಗಲಿಲ್ಲ. ಅಕ್ರಮ ಸಕ್ರಮ ಸಮಿತಿಯನ್ನೂ ಸಹ ಮಾಡುವುದಕ್ಕಾಗಿಲ್ಲ. ತಾವೇ ಭರವಸೆ ಕೊಟ್ಟಂತೆ ಆಶ್ರಯ ಸಮಿತಿಯನ್ನೂ ಸಹ ಮಾಡದೇ ನಾವು ಯಾವ ಒಂದು ಪಾಪಕ್ಕೆ ಯಾರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೋ ಗೊತ್ತಿಲ್ಲ. ಈ ವರ್ಷ ಈ ರಾಜ್ಯದ ಬಡವರಿಗೆ ಸುಮಾರು 10 ಸಾವಿರ ಮನೆಗಳು ಆಗುವಂತಾದ್ದು ತಪ್ಪಿ ಹೋಯಿತು. ಈ ಎಲ್ಲಾ ಗೊಂದಲದ ಮಧ್ಯೆ ಶಾಸಕರು ಇಷ್ಟು ದೊಡ್ಡ ಸಂಖ್ಯೆಯಲ್ಲಿರುವಂತಹ ಪ್ರತಿಪಕ್ಷವನ್ನು ನೀವು ಎಲ್ಲೋ ಒಂದು ಕಡೆ ಹತ್ತಿಕ್ಕಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರೇನೋ ಎನ್ನುವಂತಹ ಭಾವನೆಯನ್ನು ಜನರಲ್ಲಿ ಏಕೆ ಮೂಡಿಸುತ್ತೀರಿ? ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಂತಹ ಹಿರಿಯ ಸಚಿವರು ಪದೇ ಪದೇ ' ಯಡಿಯೂರಪ್ಪನವರೇ ಎರಡೂ ಕಡೆ ಒಂದೇ ಅಭಿಪ್ರಾಯ ಇದೆ, ನಮ್ಮ ಶಾಸಕರೂ ಅದೇ ಅಭಿಪ್ರಾಯ ಇದೆ ' ಎಂದು ಹೇಳುತ್ತಾರೆ. ಹೀಗೆಲ್ಲಾ ಇರಬೇಕಾದರೆ ನೀವು ಪಂಚಾಯತ್ ಮಸೂದೆಗೆ ಒಂದು ತಿದ್ದುಪಡಿ ತರಬೇಕು. ತಾವು ಭರವಸೆ ಕೊಟ್ಟಂತೆ ಈ ಸದನದಲ್ಲಿ ಈ ಕಾರ್ಯಕಲಾಪ ಮುಗಿಯುವುರೊಳಗೆ ತರುತ್ತೇವೆ ಎಂದು ಹೇಳಿದ್ದಿರಿ. ಇದನ್ನು ಮಾಡುವುದರ ಜೊತೆಗೆ ಆರಾಧನಾ ಸಮಿತಿಗಳನ್ನು ಮಾಡುವುದಕ್ಕೆ ನಿಮಗೇನು ಸ್ವಾಮಿ ತೊಂದರೆಯಾಗಿದೆ? ಅಕ್ರಮ ಸಕ್ರಮ ಸಮಿತಿ ರಚಿಸಲು ನಿಮಗೆ ಏನು ತೊಂದರೆಯಾಗಿದೆ? ಅದನ್ನೂ ಬೇರೆ ಯಾರಿಗಾದರೂ ಅಧಿಕಾರ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಾ? ನಾನು ಹೇಳುವಂತಾದ್ದು ಏನೆಂದರೆ ಈ ಮನೆಯಲ್ಲಿ ಒಂದು ಭರವಸೆ ಕೊಟ್ಟ ಮೇಲೆ ನಾವೇನೂ ನಿಮ್ಮನ್ನು ಕಾಡುತ್ತಿಲ್ಲ, ನಿಮ್ಮನ್ನೇನೂ ಬೇಡುತ್ತಿಲ್ಲ. ನಮ್ಮ ಕರ್ತವ್ಯವನ್ನು ನಿರ್ವಹಿಸಲಿಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿದಾಗ, ಎಂ.ಪಿ. ಪ್ರಕಾಶ್‌ರವರು ಏನು ಹೇಳಿದರು, ಸಿದ್ದರಾಮಯ್ಯನವರು ಏನು ಹೇಳಿದರು ಎಂಬ ಪ್ರಶ್ನೆ ಇದಲ್ಲ. ಒಟ್ಟಾರೆ ಸದನದ ಅಭಿಪ್ರಾಯ. ಈ

ಸಮಿತಿಯನ್ನು ಮಾಡಬೇಕು, ಅಧಿಕಾರವನ್ನು ಶಾಸಕರಿಗೆ ಕೊಡಬೇಕು, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಅಲ್ಲಿ ಇರಬೇಕು, ನಿಮ್ಮ executive ಅಧಿಕಾರಿಗಳು ಇರಬೇಕು, ಈ ಎಲ್ಲಾ ಸಂಗತಿಗಳು ಚರ್ಚೆಯಾದ ಮೇಲೆ ದಯಮಾಡಿ ಇವತ್ತು ಬಿಲ್ ಅನ್ನು ತೆಗೆದುಕೊಂಡು ಬನ್ನಿ, ನಾಳೆ ತೆಗೆದುಕೊಂಡು ಬನ್ನಿ ಇದು ಮೂಲ ಉದ್ದೇಶವೇ ಹೊರತು ಬೇರೆ ಚರ್ಚೆಗಳು ಅದಕ್ಕೆ ಉತ್ತರ ಮತ್ತೊಂದು ಈ ತರಹದ ಚರ್ಚೆಗಳಲ್ಲೇ ಕಾಲಹರಣ ಮಾಡದೇ ಆ beneficiaries ಗೆ ಅನುಕೂಲವಾಗಬೇಕು, ಶಾಸಕರು ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ಕೇಳಿದರೆ, ಒಕ್ಕೊರಲಿನಿಂದ ನಾವೆಲ್ಲಾ ಅಭಿಪ್ರಾಯ ವ್ಯಕ್ತಪಡಿಸಿದರೆ, ಮೀನಾ–ಮೇಷ ಏಕೆ ಎಣಿಸುತ್ತೀರಾ? ನಿಮ್ಮ ಉದ್ದೇಶವೇನು? ಶಾಸಕರು ವಿರೋಧ ಪಕ್ಷದಲ್ಲಿ ಜಾಸ್ತಿ ಇದ್ದಾರೆ, ಅವರ ಅಧಿಕಾರ ಕಸಿದುಕೊಳ್ಳಬೇಕು, ಅವರಿಗೆ ಅಧಿಕಾರ ಕೊಡಬಾರದು ಎಂದು ನಿಮಗೆ ಉದ್ದೇಶ ಇದೆಯೋ? ಅದನ್ನಾದರೂ ಸ್ಪಷ್ಟ ಮಾಡಿ. ಇಲ್ಲದಿದ್ದರೆ ನಾಳೆಯೊಳಗೆ ಆಶ್ರಯ ಸಮಿತಿ, ಆರಾಧನಾ ಸಮಿತಿ ಅಕ್ರಮ–ಸಕ್ರಮ ಸಮಿತಿ ಹಾಗೂ ಇನ್ನುಳಿದ ಸಮಿತಿಗಳನ್ನು ಶಾಸಕರ ಅಧ್ಯಕ್ಷತೆಯಲ್ಲಿ ನೀವು ಮಾಡಿ. ನಾವು at least ಏಪ್ರಿಲ್ 1ನೇ ತಾರೀಖಿನಿಂದಲಾದರೂ ನಾವು ಹೋಗಿ ನಮ್ಮ ಕಾರ್ಯಕಲಾಪಗಳನ್ನು ನಡೆಸಲಿಕ್ಕೆ ಅವಕಾಶ ಮಾಡಿಕೊಡಿ. ಇದೇ ನಮ್ಮ ಒತ್ತಾಯ.

ಶ್ರೀ ಜಿ.ವಿ ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ ನನ್ನದು ಒಂದೇ ಒಂದು ಅಂಶ ಇದೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಮಾತನಾಡುವಾಗ ನಾನು ಆ ರೀತಿ ಹೇಳಲಿಲ್ಲ ಎಂದು ಹೇಳಿದರು. ಇದು ನನ್ನ ವೈಯಕ್ತಿಕ ಅಭಿಪ್ರಾಯ ಎಂದು ಹೇಳಿದರು.

ಶ್ರೀ ಎಂ.ಪಿ.ಪ್ರಕಾಶ್: ನಾನು ಅದು ನನ್ನ ವೈಯಕ್ತಿಕ ಅಭಿಪ್ರಾಯ ಎಂದು ಹೇಳಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆಯಿತು, ಒಂದು ನಿಮಿಷ ನಾನು ಮಾತನಾಡುವುದಕ್ಕೆ ಬಿಡಿ. ನಾನು ನಿಮ್ಮ ಗಮನಕ್ಕೆ ತರುವಂತಾದ್ದು ಒಂದೇ ವಿಚಾರ...

ಅಧ್ಯಕ್ಷರು: ಅದೇ ವಿಚಾರವನ್ನು ಮತ್ತೆ ಮತ್ತೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವ್ಯಾಖ್ಯಾನ ಮಾಡತಕ್ಕಂಥ ಅಗತ್ಯ ಇಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಅದನ್ನು ಹೇಳುತ್ತಿಲ್ಲ. ನಾನು ಹೇಳುವ ಒಂದು ವಿಚಾರ ಕೇಳಿ. Then what is the state of the collective responsibility of the cabinet according consitution? ಈಗ ಅವರು ಹೇಳಿಲ್ಲವೆಂದೇ ಇಟ್ಟುಕೊಳ್ಳಿ, ಸಿದ್ದರಾಮಯ್ಯನವರು ಹೇಳಿದ್ದಾರೆ ಅಥವಾ ನಾಳೆ

ಖರ್ಗೆಯವರು ಹೇಳಬಹುದು. ಇನ್ಯಾರೋ ಕ್ಯಾಬಿನೆಟ್ ಪರವಾಗಿ ಅಥವಾ ಸರ್ಕಾರದ ಪರವಾಗಿ ಹೇಳಬಹುದು. ಸರ್ಕಾರದ ಪರವಾಗಿ ಯಾರಾದರೂ ಒಬ್ಬರು ಹೇಳಿದ್ದನ್ನು ಅದು ಎಂ.ಪಿಪ್ರಕಾಶ್‌ರವರು ಹೇಳದೇ ಇರಬಹುದು, ಸಿದ್ದರಾಮಯ್ಯನವರು ಸ್ಪಷ್ಟವಾಗಿ ಹೇಳಿದ್ದಾರೆ, ಹೇಳಿದಾಗ ಇದು collective resoponsibility ಪ್ರಶ್ನೆ ಬರುತ್ತದೋ ಇಲ್ಲವೋ? collective responsibility ಯಿಂದ ನಾವು ನುಣುಚಿಕೊಂಡಂತೆ ಆಗುತ್ತದೋ ಇಲ್ಲವೋ? ಆಗ ಇದರ sanctity ಏನಾಗುತ್ತದೆ? ಸರ್ಕಾರದ sanctity, cabinet sanctity ಸಂವಿಧಾನದ sanctity ಮತ್ತು ಈ ಸದನದ ಪಾವಿತ್ರ್ಯತೆ ಏನಾಗುತ್ತದೆ? ಇದು ಪ್ರಶ್ನೆ ಇರತಕ್ಕಂಥದ್ದು. ಈ ಪ್ರಶ್ನೆ ಇವತ್ತು ಗಂಭೀರವಾಗಿ ಎದ್ದು ಬಂದಿದೆ. ಒಬ್ಬರು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಕಾಶ್‌ರವರು ಹೇಳಲಿಲ್ಲ, ನಾನು ಒಪ್ಪುತ್ತೇನೆ. ನಿಮ್ಮ ಇದರ ಪ್ರಕಾರ ನೀವು ಹೇಳಲಿಲ್ಲ. ಆದರೆ ಒಬ್ಬ ಕ್ಯಾಬಿನೆಟ್ ಮಂತ್ರಿ ಹೇಳಿದ್ದನ್ನು ಅದು collective resoponsibility ನಲ್ಲಿ ಬರುತ್ತದೋ ಇಲ್ಲವೋ ಎನ್ನತಕ್ಕಂಥದ್ದರ ಬಗ್ಗೆ ತಾವು ತೀರ್ಮ ಕೊಡಬೇಕು ನನ್ನ point ಇಷ್ಟೇ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಸಮಸ್ಯೆ ಬಗೆಹರಿಸುವ ವಿಚಾರದಲ್ಲಿ ಬಹಳ ರಚನಾತ್ಮಕವಾಗಿ ಪ್ರಶ್ನೆಯನ್ನು ಎತ್ತಿದರು. ಆ ಸಂದರ್ಭದಲ್ಲಿ ನಿನ್ನೆ ಕೂಡ ಈ ವಿಚಾರದಲ್ಲಿ ಚರ್ಚೆಗೆ ಬಂದಾಗ, ಅದು ಅವರ ತಪ್ಪು ಗ್ರಹಿಕೆ ಇರಬಹುದು. ಎಂ.ಪಿಪ್ರಕಾಶ್‌ರವರು ಮಧ್ಯೆ ಪ್ರವೇಶ ಮಾಡಿದರು, ಭರವಸೆಯನ್ನು ಸ್ಪಷ್ಟವಾದ ಶಬ್ದಗಳಲ್ಲಿ ಕೊಟ್ಟರು, ಅದಕ್ಕಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಿದರು. ಮತ್ತೆ ಬೇರೆ ಬೇರೆ ಸದಸ್ಯರೆಲ್ಲಾ ಈ ಕೂಡಲೇ ಇದು ನಿರ್ಧಾರವಾಗಬೇಕು ಎಂದು ಹೇಳಿದರು. ಅರ್ಧ ಗಂಟೆಯೊಳಗಾಗಿ ಕಡತವನ್ನು ಪರಿಶೀಲನೆ ಮಾಡಿ ಉತ್ತರ ಕೊಡಬೇಕು ಎಂದರು. ಬಡವರ ದ್ರೋಹಿಗಳು ನೀವೆಲ್ಲರೂ ಸರ್ಕಾರದವರು ಅನ್ನತಕ್ಕಂಥ ಪದವನ್ನೂ ಸಹಿತ ಅವರು ಬಳಸಿದರು. ನಾನು ಆ ಸಂದರ್ಭದಲ್ಲಿ ಈ ಮಾತನ್ನು ಹೇಳಿಲ್ಲ, ತಾವು ಕಡತ ಪರಾಂಬರಿಸಬೇಕು ಎಂಬ ವಿಚಾರ ಕೂಡ ನಾವು ಹೇಳಿದ್ದೆವು, ಆ ಸಂದರ್ಭದಲ್ಲಿ ಇನ್ನು ಎರಡು ದಿವಸ ಸದನ ಇದೆ. ಒಂದು ಮನೆಯನ್ನೂ ಕೂಡ ಕೊಡಲಿಕ್ಕಾಗಲಿಲ್ಲ, ಎನ್ನತಕ್ಕಂಥ ಚರ್ಚೆ ಕೂಡ ಆಯಿತು. ಆ ಸಂದರ್ಭದಲ್ಲಿ ನಾನು ಅದಕ್ಕೊಂದು ಸರ್ಕಾರ ತನ್ನ ರಾಜಕೀಯ ಇಚ್ಛಾಶಕ್ತಿಗಳನ್ನು ಪ್ರದರ್ಶನ ಮಾಡಲಿಕ್ಕೆ ಉಪಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಚಿವ ಸಂಪುಟದ ಉಪ ಸಮಿತಿ ಇದೆ, ಇದು ಕ್ಯಾಬಿನೆಟ್‌ನಲ್ಲಿ ನಿರ್ಣಯವಾದ ಮೇಲೆ ಇದು ಎರಡು ದಿವಸದ ಪ್ರಶ್ನೆ ಅಲ್ಲ. ಇದನ್ನು ಯಾವಾಗಲಾದರೂ ಕೂಡ ಬಗೆಹರಿಸಲಿಕ್ಕೆ ಬರುತ್ತದೆ,

ಒಂದು ವೇಳೆ ಸದನ ಇಲ್ಲವೆಂದಾದರೆ, ಅಧ್ಯಾದಾಪನ ಮಾಡಲಿಕ್ಕೂ ಕೂಡ ಬರುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ತೀರಾ ದೀರ್ಘವಾಗಿ ತೆಗೆದುಕೊಂಡು ಹೋಗಬೇಕಾದಂತಹ ಅಗತ್ಯ ಇಲ್ಲ ಎಂದಾಗ, ಆಗುವುದೇ ಇಲ್ಲ ಅರ್ಧ ಗಂಟೆಯಲ್ಲಿ ತೆಗೆದುಕೊಂಡು ಹೋಗಬೇಕು. ಕಡತ ತರಿಸಿ ನೋಡಿ. ಈ ಪ್ರಶ್ನೆಯೆಲ್ಲಾ ಆಗ ಉದ್ಭವವಾಯಿತು. ನಿನ್ನೆ ಏನೋ ನಾವು ಕ್ಷಮಿಸಲಾರದಂತಹ ತಪ್ಪನ್ನು ಮಾಡಿ ಭರವಸೆ ಕೊಟ್ಟಿದ್ದೆವು ಎನ್ನುವಂತಹ ರೀತಿಯ ವಾತಾವರಣ ಇಲ್ಲಿ ಸೃಷ್ಟಿಯಾಯಿತು. ಆಗ ಮಾನ್ಯ ಸಭಾಧ್ಯಕ್ಷರು ಸದನ ಈ ದಿವಸ 10 ಗಂಟೆಗೆ ಸೇರುತ್ತದೆ ಎಂದು ಹೇಳಿ ಸಭೆಯನ್ನು ಮುಂದಕ್ಕೆ ಹಾಕಿದರು. ಇಲ್ಲಿ ಸ್ಪಷ್ಟವಾಗಿ ಈ ವಿಚಾರವನ್ನು ತಿಳಿಸಿದ್ದೆ. ತಮ್ಮೊಂದಿಗೆ ಬಂದು ಮಾತನಾಡುತ್ತೇವೆ ಎಂದು ಹೇಳಿದ್ದೇವೆ. ಇವೂ ಕೂಡ ಈ ವಿಚಾರದಲ್ಲಿ ಚರ್ಚೆಯಾಗಬೇಕಾಗಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅದು ನಡೆದಿದೆ. ಈ ವಿಚಾರದಲ್ಲಿ ಮತ್ತೆ ಚರ್ಚೆ ಮಾಡಿಕೊಂಡು ಈ ವಿಚಾರದಲ್ಲಿ ಖಂಡಿತವಾಗಿಯೂ ಕೂಡ ಎಲ್ಲರ ಅಭಿಪ್ರಾಯ ತೆಗೆದುಕೊಂಡು ಬರುತ್ತೇವೆ. ಆದರೆ ನನ್ನ ಬಗ್ಗೆ ಏನು ತಪ್ಪು ಅಭಿಪ್ರಾಯ ನಿನ್ನೆ ಆಯಿತು ಅದು ಆಗಬಾರದು. ಪತ್ರಿಕೆಗಳಲ್ಲಿ ಆ ರೀತಿ ಹೋಗಬಾರದು ಎನ್ನುವ ಕಾರಣಕ್ಕಾಗಿಯೇ ಈ ಸ್ಪಷ್ಟೀಕರಣವನ್ನು ಕೊಡುತ್ತಿದ್ದೇನೆ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಅದು collective resoponsibility. ಮಾನ್ಯ ಸಿದ್ದರಾಮಯ್ಯನವರು ಸದನಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ. ಅದು ಸ್ಪಷ್ಟವಾಗಿದೆ....

ಶ್ರೀ ಸಿದ್ದರಾಮಯ್ಯ: ನಾವು ಒಪ್ಪಿಕೊಂಡಿದ್ದೇವೆ. ಅದನ್ನು ನಾವು dispute ಮಾಡುತ್ತಿಲ್ಲ.

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ... ನಾನು ನಿಮ್ಮ ಬಗ್ಗೆ ಏನೂ ಮಾತನಾಡುತ್ತಿಲ್ಲ. ....

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಪದೇ ಪದೇ ಇದನ್ನೇ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:.... ಅವರು ಹೇಳಿದರೂ ಸರ್ಕಾರದ ಪರವಾಗಿಯೇ ಹೇಳುವುದು. ನಾನು ಹೇಳಿದರೂ ಕೂಡ ಸರ್ಕಾರದ ಪರಿವಾಗಿಯೇ ಹೇಳುತ್ತೇನೆ. ಯಾವ ಮಂತ್ರಿಗಳು ಹೇಳಿದರೂ ಕೂಡ ಸರ್ಕಾರದ ಪರವಾಗಿಯೇ ಹೇಳುತ್ತಾರೆ. That is not the question to be decided. ಈಗ ಅದೇನಾ ಇರುವುದು? whether it is a collective responsibility or not ಎನ್ನುವುದೇ ಈಗಿರುವ ಚರ್ಚೆಯೇ? that is not the discussion.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹೌದು. ನೀವು ಹೇಳಿದ್ದನ್ನು, ಒಬ್ಬ ಮಂತ್ರಿ ಹೇಳಿದ್ದನ್ನು ಇನ್ನೊಬ್ಬ ಮಂತ್ರಿ ಇಲ್ಲವೆಂದು ಹೇಳುತ್ತಾರೆ. ಸಿದ್ದರಾಮಯ್ಯನವರು ದಯವಿಟ್ಟು ಕ್ಷಮಿಸಬೇಕು. ನಾನು ಕಮಿಟಿ ಬಗ್ಗೆ ಮಾತನಾಡುತ್ತಿಲ್ಲ. I am talking about only the collective reponsibility of the cabinet...

ಅಧ್ಯಕ್ಷರು: ಆಯಿತು, ಅದರ ಬಗ್ಗೆ ನಾನು ನಿರ್ಣಯ ತೆಗೆದುಕೊಂಡು I will give my ruling....

(ಗೊಂದಲ)

ಶ್ರೀ ಸಿದ್ದರಾಮಯ್ಯ: Admittedly it is a collective responsibility. what more you want?

ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಎಂದು ಒಪ್ಪಿಕೊಂಡಿದ್ದೇವೆ. ರಾಜ್ಯಾಂಗ ಬದ್ಧ ಆಗಿರುವುದು ಯಾರು ಡಿಸ್ಪ್ಯೂಟ್ ಮಾಡುವುದಕ್ಕಾಗುತ್ತಾ? ಕಾನೂನು ಡಿಸ್ಪ್ಯೂಟ್ ಮಾಡುವುದಕ್ಕಾಗುತ್ತಾ? ರಾಜ್ಯಾಂಗ ಡಿಸ್ಪ್ಯೂಟ್ ಮಾಡುವುದಕ್ಕಾಗುತ್ತಾ? ಇದನ್ನು ಯಾವುದೂ ಡಿಸ್ಪ್ಯೂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ನಾನು ಹೇಳಿರುವುದು ನಿಜ ಮಾನ್ಯ ಅಧ್ಯಕ್ಷರೆ. ಇಲ್ಲಿ ಚರ್ಚೆ ಆಗುವಾಗ ಈ ಸದನದಲ್ಲಿ ತಿದ್ದುಪಡಿ ತರುತ್ತೇವೆಂದು ಹೇಳಿರುವುದು ನಿಜ. ಆವತ್ತೆ ಅದೇ ದಿನ ನೀವು ನಿಮ್ಮ ಕೋಣೆಯಲ್ಲಿ ಒಂದು ಮೀಟಿಂಗ್ ಕರೆದಿರಿ. ಆ ಮೀಟಿಂಗ್ ಕರೆದಾಗ ಯಡಿಯೂರಪ್ಪನವರು ಒಂದು ಪ್ರಸ್ತಾಪ ಮಾಡಿದರು. ಮುಖ್ಯಮಂತ್ರಿಗಳು ಹೇಳಿದರು. ಸ್ವಲ್ಪ ನಮ್ಮ ತೊಡಕುಗಳಿವೆ. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಈ ಸದನದಲ್ಲಿ ಆಗುವುದಿಲ್ಲ ಮುಂದೆ ತೆಗೆದುಕೊಂಡು ಬರುತ್ತೇವೆಂದು ಹೇಳಿದರು. ನೀವು ಅದಕ್ಕೆ ಸಾಕ್ಷಿ ಎಂದು ಹೇಳಬೇಕೆಂದು ಏನೂ ಇಲ್ಲ. ನಿಮ್ಮ ಎದುರಿಗೇ ಇದ್ದೇವೆ. ಅವರೂ ಇದ್ದಾರೆ. ಅವರೆಲ್ಲರೂ ಇದ್ದರೂ ಎಲ್ಲಾರೂ ಇದ್ದರೂ ಯಾರೂ ಕೂಡ ಮುಖ್ಯಮಂತ್ರಿಗಳ ಎದುರಿಗೆ ಇಲ್ಲ ಇಲ್ಲ ಆಗಲೇಬೇಕೆಂದು ಹೇಳಲಿಲ್ಲ. ಸುಮ್ಮನೆ ಆಗಿ ಬಿಟ್ಟರು ಎಲ್ಲಾರೂ. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ತರೋಣವೆಂದು ತೀರ್ಮಾನ ಮಾಡಿರುವುದು ನಿಜ. ಆದರೆ ಈ ಸದನ ಮುಗಿಯುವುರೊಳಗೆ ತರುವುದಕ್ಕೆ ತೀರ್ಮಾನ ಮಾಡಿರುವುದು ನಿಜ. ಆದರೆ ಈ ಸದನ ಮುಗಿಯುವುರೊಳಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ we need some time. ಇದನ್ನು ನಾವು ಒಪ್ಪಿಕೊಂಡಿದ್ದೇವೆ. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ ಮೇಲೆ ತಿದ್ದುಪಡಿ ತರುತ್ತೇವೆ. ಮುಂದಿನ ಸಾರಿ ಸದನ ಸೇರಿದಾಗ ಅದನ್ನು ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ದಯಮಾಡಿ ತಮ್ಮ ಸಮಕ್ಷಮ ನಡೆದಾಗ ಸಹ ಮುಖ್ಯಮಂತ್ರಿಗಳು ಗೊಂದಲ ಇದೆ ಎಂದರೆ ಒತ್ತಾಯ ಮಾಡಿದೆ.

ಆಯಿತು ಎಂದು ಒಪ್ಪಿಕೊಳ್ಳುವ ತರಹ ವಾತಾವರಣ ಮೂಡಿತ್ತು. ಅದು ನಿಮ್ಮ ಬಿಎಸಿ ಸೇರಿದಾಗ ಮತ್ತು ಬೇರೆ ಸಮಿತಿ ಸಭೆ ಸೇರಿದಾಗ ನಡೆದಂತಹ ವಿಷಯ. ಈ ಮನೆಯಲ್ಲಿ ಏನು ಚರ್ಚೆ ಆಗುತ್ತದೆ ಅದಕ್ಕೆ ಎಲ್ಲರೂ ಬದ್ಧರಾಗಿದ್ದೆವು ಎಂದು ನಾನು ಅಂದುಕೊಂಡಿದ್ದೇನೆ. ನಾನು ಸಿದ್ದರಾಮಯ್ಯನವರಿಗೆ ಉತ್ತರ ಕೊಟ್ಟ ತಕ್ಷಣ ನಾಳೆಯೇ ಇದನ್ನು ತೆಗೆದುಕೊಂಡು ಬರಬೇಕೆಂದು ಹೇಳಿದೆ. ಅದಕ್ಕೆ ಅವರು ಏನು ಹೇಳಿದರು, ಈ ಸದನ ಮುಗಿಯುವುದರ ಒಳಗೆ ತೆಗೆದುಕೊಂಡು ಬರುತ್ತೇವೆಂದು ಹೇಳಿದರು. ಇವರು ನಾಳೆಯೇ ತೆಗೆದುಕೊಂಡು ಬನ್ನಿ ಎಂದು ಹೇಳಿದರೆ ಹೇಗೆ ಸಾಧ್ಯ? ಇನ್ನು ಎರಡು ದಿನದಲ್ಲಿ ಬಿಲ್ ತರುತ್ತೀರಿ ಎಂದು ಕೇಳಿದೆ. ಹಾಗಾದರೆ ರೆವಿನ್ಯೂ ಮಂತ್ರಿಗಳು ಬರಲಿ, ಬಂದ ಮೇಲೆ ಮಾತನಾಡಿ ತೀರ್ಮಾನ ಮಾಡೋಣ. ಅವರು ಅವರ ಕ್ಷೇತ್ರಕ್ಕೆ ಹೋಗಿದ್ದಾರೆ ಅವರು ಬರಬೇಕು. ಒಟ್ಟಿನಲ್ಲಿ ಈ ಆರ್ಥಿಕ ಸಾಲಿನ ವರ್ಷಕ್ಕೆ ಸಂಬಂಧಪಟ್ಟಂತೆ ಬಿಲ್ಲನ್ನು ತಿದ್ದುಪಡಿ ಮಾಡಿ ಈ ಸದನ ಮುಗಿಯುವುದರೊಳಗೆ ತರುತ್ತೇವೆಂದು ಹೇಳಿದರು.

ಶ್ರೀ ಸಿದ್ದರಾಮಯ್ಯ: ಈ ಸ್ಟೇಟ್‌ಮೆಂಟ್ ಯಾವ ಕಾಂಟೆಕ್ಸ್ಟ್‌ನ ಮೇಲೆ ಮಾಡಿದೆ ಎಂದರೆ ರೆವಿನ್ಯೂ ಮಂತ್ರಿಗಳು ಇಲ್ಲಿ ಒಪ್ಪಿಕೊಂಡಿದ್ದಾರೆಂದು ಇಲ್ಲಿ ಎಲ್ಲಾ ಹೇಳಿದರು. ರೆವಿನ್ಯೂ ಮಂತ್ರಿಗಳು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆಂದು ಎಲ್ಲರೂ ಹೇಳಿದರು. ಹಾಗಿದ್ದರೆ ರೆವಿನ್ಯೂ ಮಂತ್ರಿಗಳು ಇಲ್ಲ, ಬರಲಿ ಅವರು ಒಪ್ಪಿಕೊಂಡರೆ ಈ ಸದನದ ಒಳಗಡೆ ತೆಗೆದುಕೊಂಡು ಬರುತ್ತೇವೆಂದು ಹೇಳಿದೆ. It is a fact. fact need not be proved. It is recorded ಎಲ್ಲ ಇರುವಾಗ ಪದೇ ಪದೇ ಅದನ್ನು ಎಷ್ಟು ಸಾರಿ ಓದಿದರೂ ಅಷ್ಟೇ. ನಾನು ಹೇಳಿರುವುದು ನಿಜ, ನಾನು ಒಪ್ಪಿಕೊಂಡಿದ್ದೇನೆ. ಅದನ್ನೇ ಒತ್ತಿ ಒತ್ತಿ ಏಕೆ ಹೇಳುತ್ತೀರಿ? we need time.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಈ ರೀತಿ ಎಲ್ಲವನ್ನು ತಿರುಚಿ ರಾಜ್ಯದ ಉಪ ಮುಖ್ಯಮಂತ್ರಿಗಳು ಮಾತನಾಡಿದರೆ ಹೇಗೆ? ಒಂದು ವರ್ಷ 10,000 ಜನರಿಗೆ ಬಡವರಿಗೆ ಮನೆಗಳು ಕೊಡುವುದು ತಪ್ಪಿ ಹೋಯಿತು.

ಶ್ರೀ ಸಿದ್ದರಾಮಯ್ಯ: ಎಮ್‌ಎಲ್‌ಎಗಳು ಕೊಡದೆ ಹೋದರೆ ಪಂಚಾಯಿತಿಯವರು ಕೊಟ್ಟಿರುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಎಲ್ಲಿ ಕೊಟ್ಟಿದ್ದಾರೆ? ಈ ನಿಮಿಷದವರೆಗೆ ಒಂದು ಮನೆ ಅವರಿಗೆ ಮಂಜೂರು ಮಾಡಿಲ್ಲ. 2004–05ನೇ ಸಾಲಿನ ಮನೆಗಳು ಈ

ಗೊಂದಲದಿಂದ ಒಂದು ಮನೆ ಆದರೂ ಮಂಜೂರು ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ: ಹೋದ ಸಾರಿ ಕೊಡಲಿಲ್ಲ ಎಂದರೆ ಈ ಸಾರಿ ಕೊಡುತ್ತಾರೆ. ಮುಂದಿನ ಸಾರಿ ತೆಗೆದುಕೊಂಡು ಬರೋಣ. ಏಕೆ ಅಷ್ಟು ಹಟ ಮಾಡುತ್ತೀರಿ? I cannot understand, Government is very open. ನಮ್ಮ ಕಡೆ ಶಾಸಕರು ಎಲ್ಲಾ ಅದನ್ನು ಹೇಳುತ್ತಿದ್ದಾರೆ. ನಮಗೂ ಅವರ ಅಭಿಪ್ರಾಯಗಳು ಬಂದಿವೆ. ನಿಮ್ಮ ಶಾಸಕರೂ ಕೂಡ ಹೇಳುತ್ತಿದ್ದಾರೆ. The Government is very very open on that, ನಾವೇನು ಬಹಳ ಕನ್ಸರ್ವೇಷನ್ ಆಗುವುದಿಲ್ಲವೆಂದು ಹೇಳಲಿಲ್ಲ. ಮಾಡುವುದಿಲ್ಲವೆಂದು ಹೇಳಲಿಲ್ಲ. we need some time. ಆದ್ದರಿಂದ ಅದು ಈಗಲೇ ಆಗಬೇಕು ಎಂದು ಹೇಳಿದರೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ನಾವು 9 ತಿಂಗಳು ಕಾದಿದ್ದೇವೆ. ಈ ಸರ್ಕಾರ ರಚನೆ ಆಗಿ 9 ತಿಂಗಳು ಆಯಿತು.

ಶ್ರೀ ಸಿದ್ದರಾಮಯ್ಯ: There are some practical problems. ತರುತ್ತೇವೆಂದು ಹೇಳಿದ್ದೇವೆ. ಕಾನೂನು ತಿದ್ದುಪಡಿ ಮಾಡುತ್ತೇವೆಂದು ಹೇಳಿದ್ದೇವೆ. ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ ನೀವು ನಮ್ಮ ರಕ್ಷಣೆಗೆ ಬರಬೇಕು. ಆರಾಧನಾ ಸಮಿತಿ ಆಗಲಿಲ್ಲ, ಅಕ್ರಮ ಸಕ್ರಮ ಸಮಿತಿ ಆಗಲಿಲ್ಲ, ಆರಾಧನಾ ಸಮಿತಿ ಎಲ್ಲಿ ಆಯಿತು? ಲ್ಯಾಂಡ್‌ಆರ್ಡ್ ಸಮಿತಿ ಆಗಲಿಲ್ಲ, ಶಾಸಕರಾಗಿ ನಮ್ಮ ಕರ್ತವ್ಯ ನಿರ್ವಹಿಸದಂತೆ ಅಡ್ಡಿ ಮಾಡುವಂತಹ ವ್ಯವಸ್ಥಿತವಾದ ಪ್ರಯತ್ನ ನಡೆಯುತ್ತಿದೆ ಇಲ್ಲಿ? ಶಾಸಕರಾಗಿ ಕೆಲಸ ಮಾಡುವುದು ಹೇಗೆ?

ಅಧ್ಯಕ್ಷರು: ಯಡಿಯೂರಪ್ಪನವರೇ ಮುಖ್ಯಮಂತ್ರಿಗಳು ಇಲ್ಲ, ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾರೆ ಬರುತ್ತಾರೆ, ಆಗ ತಕ್ಷಣ ನಿಮಗೆ ಎಲ್ಲರಿಗೂ ಕರೆಸುತ್ತೇವೆ. ಅವರಿಗೂ ಕರೆಸುತ್ತೇನೆ. ಬೇರೆ ಕಮಿಟಿಗಳು ಆಗಬಹುದು. ಮಾತನಾಡಿ ಎಲ್ಲ ವಿಚಾರಗಳನ್ನು ಅಲ್ಲಿ ಯೋಚನೆ ಮಾಡಿ ಅವರ ಎದುರಿಗೆ ಒಂದು ತೀರ್ಮಾನಕ್ಕೆ ಬರೋಣ. ನಾಳೆ ಬೆಳಿಗ್ಗೆಯೇ ಕರೆಯುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆ ಸದನದ ಕಾರ್ಯಕಲಾಪ ಮುಗಿಯುವುದರೊಳಗೆ ನಿಮ್ಮ ಕೊಠಡಿಗೆ ಕರೆಯಿರಿ. ಅಕ್ರಮ ಸಕ್ರಮ ಏನು ಮಾಡುತ್ತಾರೆ, ಆರಾಧನಾ

ಸಮಿತಿ ಏನು ಮಾಡುತ್ತಾರೆ? ಮಾಡುವುದಿಲ್ಲ ಎಂದು ಒಂದು ಸಾರಿ ಹೇಳಿ ಬಿಡಿ.

ಅಧ್ಯಕ್ಷರು: ನಾಳೆ ಕರೆಯೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆ ಸದನ ಸೇರುವುದಕ್ಕೆ ಮುಂಚೆ ಕರೆಯಬೇಕು.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ(ಕಲಘಟಗಿ)

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು)

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಧಾರವಾಡ ಜಿಲ್ಲೆಯಲ್ಲಿರುವ ಕಲ್ಲು ಗಣಿ ಕ್ವಾರಿಗಳು ಎಷ್ಟು (ತಾಲ್ಲೂಕು ವಾರು ಮತ್ತು ಅವುಗಳ ಮಾಲೀಕರ ವಾರು ವಿವರಗಳನ್ನು ನೀಡುವುದು).</td><td>ಧಾರವಾಡ ಜಿಲ್ಲೆಯಲ್ಲಿ ಯಾವುದೇ ಅಲಂಕಾರಿಕ ಗ್ರಾನೈಟ್ ಗಣಿಗಾರಿಕೆಗೆ ಗುತ್ತಿಗೆ ನೀಡಿರುವುದಿಲ್ಲ. ಕೇವಲ ಕಟ್ಟಡ ಕಲ್ಲು ಗಣಿಗಾರಿಕೆಗೆ ಮಾತ್ರ 155 ಕಲ್ಲುಗಣಿ ಗುತ್ತಿಗೆ ನೀಡಿದೆ. ತಾಲ್ಲೂಕು ವಾರು ಮತ್ತು ಗುತ್ತಿಗೆದಾರರ ವಿವರ ವನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಆ.</td><td>ಸರ್ಕಾರದಿಂದ ಗುತ್ತಿಗೆಯನ್ನು (ಲೀಸ್) ಪಡೆದ ಕ್ವಾರಿಗಳ ಸಂಖ್ಯೆ ಎಷ್ಟು ಅವು ಯಾವುವು:</td><td>ಉ. ತಾಲ್ಲೂಕುವಾರು ಮಂಜೂರಾದ ಗುತ್ತಿಗೆಗಳ ವಿವರ ಕೆಳಗಿನಂತಿದೆ.
<table>
<tr><td>1. ಧಾರವಾಡ</td><td>:</td><td>30</td></tr>
<tr><td>2. ಕಲಘಟಗಿ</td><td>:</td><td>81</td></tr>
<tr><td>3. ಹುಬ್ಬಳ್ಳಿ</td><td>:</td><td>41</td></tr>
<tr><td>4. ನವಲಗುಂದ</td><td>:</td><td>02</td></tr>
<tr><td>5. ಕುಂದಗೋಳ</td><td>:</td><td>01</td></tr>
<tr><td>ಒಟ್ಟು</td><td>:</td><td>155</td></tr>
</table></td></tr>
</table>